
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಅಮೇರಿಕಾದ 250 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಭಾವಚಿತ್ರ ಒಳಗೊಂಡ ಚಿನ್ನದ ನಾಣ್ಯವನ್ನು ಬಿಡುಗಡೆಗೊಳಿಸಲು ಸಿದ್ಧತೆ ನಡೆದಿದೆ.


23 ಮಾರ್ಚ್ 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 12 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629





ಅದು ಆಯಿಲ್ ಫಿಲ್ಟರ್ ಕಥೆ ಇದು ವಾಟರ್ ಫಿಲ್ಟರ್ ಕಥೆ » 2





ಇಸ್ರೇಲ್ ಡಿಮೋನಾ ಪಟ್ಟಣದ ಮೇಲೆ ಇರಾನ್ ಕ್ಷಿಪಣಿ ದಾಳಿ » 3






ರಾಜಕೀಯ ಒತ್ತಡಕ್ಕೆ ಮಣಿಯದೆ ರಥೋತ್ಸವ ನಡೆಸಿ » 4


# ಇಂಧನ ಬಿಕ್ಕಟ್ಟು ಅವಲೋಕಿಸಿದ ಪ್ರಧಾನಿ

## ಮಧ್ಯಪ್ರಾಚ್ಯ ಸಂಘರ್ಷ : ಹಿರಿಯ ಸಚಿವರು, ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ

• ಪ್ರಜೋದಯ ವರದಿ

**ನವದೆಹಲಿ:** ಇರಾನ್, ಇಸ್ರೇಲ್ -ಅಮೇರಿಕಾ ನಡುವೆ ಸಂಘರ್ಷ ಮುಂದುವರೆದ ಪರಿಣಾಮ ದೇಶದಲ್ಲಿ ಪೆಟ್ರೋಲಿಯಂ, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಸಗೊಬ್ಬರ ಪರಿಸ್ಥಿತಿ ಅವಲೋಕಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಸಚಿವರು, ಅಧಿಕಾರಿಗಳೊಂದಿಗೆ ಉನ್ನತಮಟ್ಟದ ಸಭೆ ನಡೆಸಿದರು.



ಲೋಕಕಲ್ಯಾಣ ಮಾರ್ಗದಲ್ಲಿರುವ ತಮ್ಮ ಅಧಿಕೃತ ನಿವಾಸದಲ್ಲಿ ನಡೆದ ಸಭೆಯಲ್ಲಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ವಿದೇಶಾಂಗ ಸಚಿವ ಎಸ್.ಜೈಶಂಕರ್, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಸಾಯನಿಕ ಮತ್ತು ರಸಗೊಬ್ಬರ ಮತ್ತು ಆರೋಗ್ಯ ಸಚಿವ ಜೆ.ಪಿ.ನಡ್ಡಾ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ, ಕಾರ್ಮಿಕ ಮತ್ತು ಉದ್ಯೋಗ ಸಚಿವ ಮನ್ಸುಖ್ ಮಾಂಡವಿಯಾ ಮತ್ತು ಇತರೆ ಹಿರಿಯ ಸಚಿವರು ಮತ್ತು ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಸಚಿವಾಲಯದ ಹಿರಿಯ ಅಧಿಕಾರಿಗಳು ಪ್ರಧಾನ ಮಂತ್ರಿಗೆ, ಪ್ರಸ್ತುತ ದಾಸ್ತಾನು ಮಟ್ಟ, ಆಮದು-ಅವಲಂಬನೆಗಳು ಮತ್ತು ಸಂಭಾವ್ಯ ಅಡಚಣೆಗಳನ್ನು ನಿಬಾಯಿಸಲು ಹಾಕಿಕೊಂಡಿರುವ ತಾತ್ಕಾಲಿಕ ಯೋಜನೆಗಳ ಕುರಿತು ವಿವರಿಸಿದರು. ಇದೇ ವೇಳೆ ಪ್ರಮುಖ ನಗರಗಳಲ್ಲಿ, ಜಾಗತಿಕ ಏರಿಳಿತದ ಹೊರತಾಗಿಯೂ ಇಂಧನ ಬೆಲೆಗಳು ಹೆಚ್ಚಾಗಿ ಬದಲಾಗದೆ ಉಳಿದಿವೆ, ಮುಂಬೈನಲ್ಲಿ ಪೆಟ್ರೋಲ್ ಲೀಟರ್‌ಗೆ 103 ರೂ. ಮತ್ತು ಡೀಸೆಲ್ 90 ರೂ.ನ ಆಸುಪಾಸಿನಲ್ಲಿದೆ ಎಂಬುದನ್ನೂ ಗಮನಕ್ಕೆ ತಂದರು.

ಕಚ್ಚಾ ತೈಲ ಬೆಲೆ ಹೆಚ್ಚಳ ಆಗಿದ್ದರೂ ಭಾರತ ರಷ್ಯಾದಿಂದ ಅದರ ಪೂರೈಕೆ ಪಡೆದಿದೆ. ಭಾರತದಲ್ಲೂ ಪೆಟ್ರೋಲಿಯಂ ದಾಸ್ತಾನು ತಕ್ಕಮಟ್ಟಿಗೆ ಇದೆ. ಹೀಗಾಗಿ, ತೈಲ ಬೆಲೆ ಏರಿಕೆಯ ಆಘಾತವನ್ನು ಭಾರತ ತಡೆದುಕೊಂಡು, ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗದಂತೆ ನೋಡಿಕೊಂಡಿದೆ. ಪ್ರೀಮಿಯಮ್ ಪೆಟ್ರೋಲ್ ಬೆಲೆ ಮಾತ್ರವೇ ಏರಿಕೆ ಆಗಿದೆ. ಭಾರತಕ್ಕೆ ನೈಸರ್ಗಿಕ ಅನಿಲದ ಅಭಾವವೂ ಹೆಚ್ಚೇನೂ ಕಾಡುತ್ತಿಲ್ಲ. ಪೈಪ್ಡ್ ಗ್ಯಾಸ್ ಪೂರೈಕೆ ನಿರಂತರವಾಗಿದೆ. ಅರ್ಧಕ್ಕಿಂತ ಹೆಚ್ಚಿನ ನೈಸರ್ಗಿಕ ಅನಿಲವು


» ನಾಲ್ಕನೇ ಪುಟದಲ್ಲಿ


### ವೈರಿಗಳಿಗೆ ಮಾತ್ರ ಜಲಸಂಧಿ ಬಂದ್: ಇರಾನ್

ಕೊಲ್ಲಿ ರಾಷ್ಟ್ರಗಳಲ್ಲಿ ಸಾಗರ ಸುರಕ್ಷತೆಗಾಗಿ ಸಹಕರಿಸಲು ಇರಾನ್ ಸಿದ್ಧವಾಗಿದೆ ಎಂದು ವಿಶ್ವಸಂಸ್ಥೆಯ ಅಂತರ್‍ರಾಷ್ಟ್ರೀಯ ಸಮುದ್ರಯಾನ ಸಂಘಟನೆಯ (ಐಎಂಒ) ಇರಾನ್ ಪ್ರತಿನಿಧಿ ಅಲಿ ಮೌಸವಿ ತಿಳಿಸಿದ್ದಾರೆ. ಹೊರ್ಮುಜ್ ಜಲಸಂಧಿಯಲ್ಲಿ ಇರಾನ್‌ನ ವೈರಿಗಳು ಹಾಗು ಅವರೊಂದಿಗೆ ನಂಟು ಹೊಂದಿರುವ ರಾಷ್ಟ್ರಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಹಡಗುಗಳ ಸಂಚಾರಕ್ಕೆ ಮುಕ್ತವಾಗಿದೆ. ರಾಜತಾಂತ್ರಿಕತೆ ಇರಾನ್‌ನ ಆದ್ಯತೆಯಾಗಿದೆ. ಪರಸ್ಪರ ನಂಬಿಕೆ ಹಾಗು ವಿಶ್ವಾಸವು ಹೆಚ್ಚು ಮುಖ್ಯವೆನಿಸುತ್ತದೆ. ಅಮೇರಿಕಾ ಹಾಗು ಇಸ್ರೇಲ್ ನಡೆಸಿರುವ ದಾಳಿಯು ಹೊರ್ಮುಜ್ ಜಲಸಂಧಿಯಲ್ಲಿ ಈಗಿನ ಪರಿಸ್ಥಿತಿಗೆ ಕಾರಣವಾಗಿದೆ ಎಂದು

# ಅನ್ಯಾಯ ನಡೆಯುತ್ತಿದ್ದರೆ ಕಣ್ಮುಚ್ಚಿ ಕೂರಲು ಆಗಲ್ಲ

## ಅಧಿಕಾರಿಗಳಿಗೆ ಕಿರುಕುಳ ನೀಡುವ ಪ್ರಶ್ನೆಯೇ ಇಲ್ಲ: ಶ್ರೇಯಸ್ ಆರೋಪಕ್ಕೆ ರೇವಣ್ಣ ತಿರುಗೇಟು

• ಪ್ರಜೋದಯ ವರದಿ

**ಹೊಳೆನರಸೀಪುರ:** ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು. ಲೂಟಿ ನಡೆದರೆ ಅದನ್ನು ಪ್ರಶ್ನಿಸುವುದು ನನ್ನ ಕರ್ತವ್ಯ. ವಿಧಾನಸಭೆಯಲ್ಲಿ ವಿಚಾರ ಪ್ರಸ್ತಾಪಿಸುವುದು ತಪ್ಪೇ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಪ್ರಶ್ನಿಸಿದರು.



ಪಟ್ಟಣದ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಅನ್ಯಾಯ ನಡೆಯುತ್ತಿದ್ದರೆ ಕಣ್ಮುಚ್ಚಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ನಾನು ಈಗ ಮಂತ್ರಿಯಾಗಿಲ್ಲ, ಸರ್ಕಾರವೂ ನಮ್ಮದಲ್ಲ, ಹೀಗಿರುವಾಗ ಅಧಿಕಾರಿಗಳಿಗೆ ಕಿರುಕುಳ ನೀಡುವ ಪ್ರಶ್ನೆಯೇ ಇಲ್ಲವೆಂದು ಸಂಸದ ಶ್ರೇಯಸ್ ಪಟೇಲ್ ಅವರ ಆರೋಪಗಳಿಗೆ ತಿರುಗೇಟು ನೀಡಿದರು.

ಶ್ರೀ ಲಕ್ಷ್ಮಿನರಸಿಂಹಸ್ವಾಮಿ ರಥೋತ್ಸವದ ವೇಳೆ ಅವ್ಯವಸ್ಥೆಗಳ ಕೊರತೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಬಟ್ಟೆ ಅಲಂಕಾರವಿಲ್ಲದೆ ತೇರು ಎಳೆಯಲಾಗಿದೆ. ಜಿಲ್ಲಾಧಿಕಾರಿ ಸ್ಥಳೀಯ ಶಾಸಕರಿಗೆ ಅಗೌರವ ತೋರಿದ್ದಾರೆ. ಈ ಸಂಬಂಧ ವಿಧಾನಸಭೆಯಲ್ಲಿ ಹಕ್ಕುಚ್ಯುತಿ ಮಂಡನೆಗೆ ಮನವಿ ಮಾಡಿರುವೆ ಎಂದು ಮತ್ತೊಮ್ಮೆ ಸ್ಪಷ್ಟನೆ ನೀಡಿದರು.

ಜಿಲ್ಲೆಯಲ್ಲಿ ಭೂ ಮಾಫಿಯಾ ಚಟುವಟಿಕೆಗಳು ಹೆಚ್ಚುತ್ತಿದೆ. ವಿಮಾನ ನಿಲ್ದಾಣಕ್ಕೆ ಮೀಸಲಿಟ್ಟ ಜಾಗವನ್ನೂ ಕಬಳಿಸುವ ಯತ್ನಗಳು ನಡೆಯುತ್ತಿವೆ. ಯಾರ್‍ಯಾರು ಇದರಲ್ಲಿ ಭಾಗಿಯಾಗಿದ್ದಾರೆ, ಯಾವ ಅಧಿಕಾರಿಗಳು ಸಹಕಾರ ನೀಡುತ್ತಿದ್ದಾರೆಂಬುದರ ಬಗ್ಗೆ ಮಾಹಿತಿ ಇದೆ. ಸಮಯ ಬಂದಾಗ ದಾಖಲೆ ಸಹಿತ ಬಹಿರಂಗಪಡಿಸುತ್ತೇನೆ. ಕಲ್ಲೊಡೆಬಾರೆ ಕಾವಲಿನಲ್ಲಿ ಸುಮಾರು 95 ಸಾವಿರ ಮೆಟ್ರಿಕ್ ಟನ್ ಎಂ-ಸ್ಯಾಂಡ್ ಮತ್ತು ಜೆಲ್ಲಿ ಲೂಟಿ ನಡೆದಿದೆ. ಈ ಬಗ್ಗೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಹಂಗರಹಳ್ಳಿಯಲ್ಲಿ ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುತ್ತಿದ್ದ ಕ್ರಷರ್‌ನ್ನು ಡೀಮ್ಡ್ ಫಾರೆಸ್ಟ್ ಕಾರಣ ನೀಡಿ ನಿಲ್ಲಿಸಲಾಗಿದೆ. ಇನ್ನೊಂದೆಡೆ ಅರಣ್ಯ ಪ್ರದೇಶದಲ್ಲೇ ನಡೆಯುತ್ತಿರುವ ಕ್ರಷರ್‌ಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇತ್ತೀಚಿನ ಆಡಳಿತದಲ್ಲಿ ಜನರಿಗೆ ತೊಂದರೆ ಹೆಚ್ಚಾಗಿದ್ದು, ಕೆಲಸಗಳು ಆಗುತ್ತಿಲ್ಲ. ಕಾನೂನುಬಾಹಿರ ಚಟುವಟಿಕೆಗಳನ್ನು ಪ್ರಶ್ನಿಸುವುದು ತಪ್ಪೇ ಎಂದು ಕೇಳಿದರು.


ಹಾಸನ ಹಿಮ್ಸ್ ಆಸ್ಪತ್ರೆ ದನದ ದೊಡ್ಡಿಯಂತಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಬೇಕು. ಹೊಳೆನರಸೀಪುರ ಆಸ್ಪತ್ರೆಯಲ್ಲಿ ಅಗತ್ಯ ಸೌಲಭ್ಯಗಳು ಮತ್ತು ವೈದ್ಯರನ್ನು ಒದಗಿಸಲಾಗಿದೆ ಎಂದರು.

# ಡೀಮ್ಡ್ ಅರಣ್ಯ ಮರು ಪರಿಶೀಲನೆಗೆ ಚಾಲನೆ

## ಸುಪ್ರೀಂ ಕೋರ್ಟ್ ಸೂಚನೆ | ಅರಣ್ಯ-ಕಂದಾಯ ಇಲಾಖೆಯಿಂದ ಜಂಟಿ ಸರ್ವೆ

• ಪ್ರಜೋದಯ ವರದಿ

**ಹಾಸನ:** ಸುಪ್ರೀಂಕೋರ್ಟ್ ಸೂಚನೆ ಹಿನ್ನಲೆ ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶ ಪುನರ್ ಪರಿಶೀಲನಾ ಕಾರ್ಯಕ್ಕೆ ಚಾಲನೆ ದೊರೆತಿದೆ.



2022ರ ವರದಿ ಅನ್ವಯ ರಾಜ್ಯದಲ್ಲಿರುವ ಒಟ್ಟು ಡೀಮ್ಡ್ ಅರಣ್ಯ ಪ್ರದೇಶದ ಬಗ್ಗೆ ಸರ್ವೋಚ್ಚ ನ್ಯಾಯಾಲಯಕ್ಕೆ ವರದಿ ನೀಡಲಾಗಿತ್ತು. ಈ ಹಿನ್ನಲೆ ಪುನರ್ ಪರಿಶೀಲನೆ ನಡೆಸಿ, ವಾಸ್ತವದಲ್ಲಿರುವ ಪರಿಭಾವಿತ ಅರಣ್ಯ ಪ್ರದೇಶವನ್ನು ಗುರುತಿಸಲು ಸಮಿತಿ ರಚನೆ ಮಾಡಲಾಗಿತ್ತು. ಇದೀಗ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಜಂಟಿ ಸರ್ವೆ ನಡೆಸಿ, ಡೀಮ್ಡ್ ಅರಣ್ಯ ಪ್ರದೇಶವನ್ನು ಗುರುತಿಸಿ ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿದೆ.

ಈ ಹಿನ್ನಲೆ ಅರಣ್ಯ ಇಲಾಖೆ ಜಿಲ್ಲೆಯಲ್ಲಿರುವ ಪರಿಭಾವಿತ ಅರಣ್ಯ ಪ್ರದೇಶದ ವಿವಿಧ ಸರ್ವೆ ನಂಬರ್‌ಗಳ ಕುರಿತು ದಾಖಲೆ ನೀಡಿದೆ. ಸುಪ್ರೀಂ ಕೋರ್ಟ್ ಸೂಚನೆ ಆಧರಿಸಿ ರಚನೆಯಾಗಿರುವ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿ ಕಣ್ಣಾವಲಿನಲ್ಲಿ ಭೂ ಸರ್ವೆ ನಡೆಯಲಿದೆ. ಅರಣ್ಯ ಪ್ರದೇಶದ ಒತ್ತುವರಿ ಬಿಕ್ಕಟ್ಟು ತೀವ್ರಗೊಂಡಿರುವ ಹೊತ್ತಲ್ಲಿ ಡೀಮ್ಡ್ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆ ಸುರ್ಪದಿಗೆ ಒಪ್ಪಿಸುವ ಕ್ರಮಕ್ಕೆ ಜಿಲ್ಲೆಯಲ್ಲಿ ತ್ವರಿತ ಕ್ರಮ ಆರಂಭವಾಗಿದೆ.

ಕಂದಾಯ ಇಲಾಖೆ ಆರ್‌ಟಿಸಿ ದಾಖಲೆಯಲ್ಲಿ ಡೀಮ್ಡ್ ಫಾರೆಸ್ಟ್ ಎಂದು ನಮೂದಿಸಿ ಅರಣ್ಯ ಇಲಾಖೆಗೆ ಒಪ್ಪಿಸಲು ಕ್ರಮ ಕೈಗೊಳ್ಳುವಂತೆ ಅರಣ್ಯ, ಜೀವಿ ಪರಿಸರ ಇಲಾಖೆ ಸರ್ಕಾರದ ಆಧೀನ ಕಾಯದರ್ಶಿ ಆದೇಶದಲ್ಲಿ ಸೂಚಿಸಿದೆ. ಹೀಗಾಗಿ ಬಹುಕಾಲದಿಂದ ಕಾನೂನಾತ್ಮಕವಾಗಿ ಕಂದಾಯ ಇಲಾಖೆಯಲ್ಲಿ ರೈತರ ವಿಶೇಷ ಹಕ್ಕುಳ್ಳ ಕಾನು, ಖರಾಬ್, ಗೋಮಾಳ ಪ್ರದೇಶ ಸೇರಿ ಕಂದಾಯ ವರ್ಗೀಕೃತ ಭೂ ಪ್ರದೇಶದ ಮೇಲೆ ರೈತರು ಹಕ್ಕು ಕಳೆದುಕೊಳ್ಳುವ ಆತಂಕ ಎದುರಾಗಿದೆ.

ಸೊಪ್ಪಿನಬೆಟ್ಟ, ಕಾನು, ಕುಮ್ಕಿ, ಬಾನೆ, ಗೋಮಾಳ, ಸರ್ಕಾರಿ ಖರಾಬ್ ಪ್ರದೇಶ 1964 ಕರ್ನಾಟಕ ಭೂ ಸುಧಾರಣೆ ಕಾಯ್ದೆ ಸೆಕ್ಷನ್ 71ರ ಅನ್ವಯ ರೈತರ ವಿಶೇಷ ಹಕ್ಕುಳ್ಳ ಪ್ರದೇಶವಾಗಿ ಗುರುತಾಗಿದೆ. ಈ ಪ್ರದೇಶ ಅರಣ್ಯಯೇತರ ಉದ್ದೇಶಕ್ಕೆ ಬಳಕೆ ಆಗದಂತೆ ಸಂರಕ್ಷಿಸಿ ಅಭಿವೃದ್ಧಿಪಡಿಸಲು ಅರಣ್ಯ ಇಲಾಖೆಗೆ ಸರ್ಕಾರ ಪೂರ್ಣ ಹಕ್ಕು ನೀಡಿದ್ದು, ಜವಾಬ್ದಾರಿಯನ್ನು ವಲಯಾರಣ್ಯಾಧಿಕಾರಿಗೆ ವಹಿಸಿದೆ. ಆದ್ದರಿಂದ ಈ ಮರು ಪರಿಶೀಲನಾ ಕಾರ್ಯ ಜಿಲ್ಲೆಯ ರೈತರಿಗೆ ಯಾವ ಮಟ್ಟದಲ್ಲಿ ಅನಾನುಕೂಲ ಮಾಡಲಿದೆ ಎಂಬುದು ವರದಿ ಬರುವವರೆಗೂ ಕಾಯಬೇಕಿದೆ.

### ಡಿಸಿಎಫ್ ವರದಿ ಸಲ್ಲಿಕೆ

ವನ ಸಂರಕ್ಷಣೆ ಮತ್ತು ಸಂವರ್ಧನೆ ಅಧಿನಿಯಮ 1980ರ ತಿದ್ದುಪಡಿ ಅಧಿನಿಯಮ 1988 ಮತ್ತು 2023ರ ಅನ್ವಯ ಮರುಪರಿಶೀಲನೆಗೆ ಕ್ರಮ ವಹಿಸಲಾಗಿದೆ. ಮರು ಪರಿಶೀಲನೆಯಲ್ಲಿ ಕಂದಾಯ ಇಲಾಖೆಯ ರಾಜಸ್ವ ನಿರೀಕ್ಷಕ, ಗ್ರಾಮ ಆಡಳಿತಾಧಿಕಾರಿ, ಭೂ ಮಾಪಕ, ಅರಣ್ಯ ಇಲಾಖೆ ಸಿಬ್ಬಂದಿ ಜಂಟಿ ಸರ್ವೆ ನಡೆಸಿ ನಕ್ಷೆ ಮೂಲಕ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ವರದಿ ಸಲ್ಲಿಸುವಂತೆ ಆದೇಶಿಸಲಾಗಿದೆ. ಈ ವರದಿಯನ್ನು ಡಿಸಿಎಫ್ ಪರಿಶೀಲಿಸಿ, ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ವರದಿ ಮಂಡಿಸಿ ಎಲ್ಲಾ ಶಾಸಕರಿಗೂ ಮಾಹಿತಿ ನೀಡಬೇಕಿದೆ.

### ಶಾಸಕರು ಗಂಭೀರವಾಗಿ ಗಮನಿಸಬೇಕು

ಡೀಮ್ಸ್ ಫಾರೆಸ್ಟ್ ವ್ಯಾಪ್ತಿಗೆ ಕಂದಾಯ ಇಲಾಖೆಗೆ ಸೇರಿದ ಜಾಗ ಸೇರ್ಪಡೆ ಆಗುವ ಹಿನ್ನಲೆ ಜಂಟಿ ಸರ್ವೆಯ ನಕ್ಷೆ ವರದಿ ಸಲ್ಲಿಕೆ ಮುನ್ನ ಗ್ರಾಮಸ್ಥರು, ಜನಪ್ರತಿನಿಧಿಗಳು ಗಂಭೀರವಾಗಿ ಗಮನಿಸಬೇಕಿದೆ. ಕ್ಷೇತ್ರದ ಶಾಸಕರು ಜಿಲ್ಲಾ, ತಾಲ್ಲೂಕು ಮಟ್ಟದ ಸಮಿತಿಯಲ್ಲಿರುವ ಅಧಿಕಾರಿಗಳನ್ನು ಸಂಪರ್ಕಿಸಿ ಜಂಟಿ ಸರ್ವೆ ಕುರಿತು ಗ್ರಾಮಸ್ಥರಿಗೆ, ಗ್ರಾಮ ಪಂಚಾಯಿತಿ ಆಡಳಿತಕ್ಕೆ ಸಾರ್ವಜನಿಕರಿಗೆ ಮಾಹಿತಿ ಒದಗಿಸುವಂತೆ ಸೂಚಿಸುವ ಅಗತ್ಯವಿದೆ.

### ಜಿಲ್ಲೆಯಲ್ಲಿ 1.5 ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯ

ಜಿಲ್ಲೆಯಲ್ಲಿ 1.5 ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರದೇಶವನ್ನು ಡೀಮ್ಡ್ ಅರಣ್ಯ ಎಂದು ಅಧಿಕಾರಿಗಳು ಈ ಹಿಂದೆ ಗುರುತಿಸಿದ್ದರು. ಈ ಜಮೀನಿನಲ್ಲಿ ಮನೆ, ದೇವಸ್ಥಾನ, ಶಾಲೆ, ಆಸ್ಪತ್ರೆ ಸೇರಿ ಜನವಸತಿ ಪ್ರದೇಶ ಸೇರ್ಪಡೆಯಾಗಿತ್ತು. ಸಕಲೇಶಪುರ ತಾಲ್ಲೂಕಿನ ಹಾನುಬಾಳು ಹೋಬಳಿ ವ್ಯಾಪ್ತಿಯಲ್ಲಿ 8ಕ್ಕೂ ಹೆಚ್ಚು ಜನವಸತಿ ಗ್ರಾಮಗಳು ಡೀಮ್ಡ್ ಅರಣ್ಯ ವ್ಯಾಪ್ತಿಗೆ ಒಳಪಡುವುದರಿಂದ ಸಾರ್ವನಿಕ ವಲಯದಲ್ಲಿ ಭಾರೀ ವಿರೋಧ ವ್ಯಕ್ತವಾಗಿತ್ತು. ಇದೀಗ ಮರು ಪರಿಶೀಲನೆ ಕಾರ್ಯಕ್ಕೆ ಮುಂದಾಗಿರುವುದರಿಂದ ಜನರಿಗೆ ಯಾವ ರೀತಿ ಅನುಕೂಲವಾಗಲಿದೆ ಎಂಬ ಕುತೂಹಲ ಮೂಡಿದೆ.

# ಇಳಿಕೆ ಹಾದಿಯಲ್ಲಿ ತಂಬಾಕು ಬೆಲೆ: ನಷ್ಟದ ಸುಳಿಯಲ್ಲಿ ಬೆಳೆಗಾರರು

## ಫಲ ನೀಡದ ಕೇಂದ್ರ ಸಚಿವರ ಭೇಟಿ | ವರ್ತಕರ ಕಪಿಮುಷ್ಟಿಯಲ್ಲಿ ಮಾರುಕಟ್ಟೆ

• ಪ್ರಜೋದಯ ವರದಿ

**ಅರಕಲಗೂಡು:** ಅಬಕಾರಿ ಸುಂಕ ಹೇರಿಕೆಯಿಂದ ಪಾತಾಳಕ್ಕೆ ಕುಸಿದಿರುವ ತಂಬಾಕು ಬೆಲೆಯಲ್ಲಿ ಏರಿಕೆ ಕಾಣದೆ ಬೆಳೆಗಾರರು ನಷ್ಟದ ಸುಳಿಗೆ ಸಿಲುಕಿದ್ದಾರೆ.

ನಿರೀಕ್ಷಿತ ಬೆಲೆ ಸಿಗದ ಹಿನ್ನಲೆಯಲ್ಲಿ ರಾಮನಾಥಪುರದಲ್ಲಿ ತಂಬಾಕು ಬೇಲ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಲಾಗಿತ್ತು. ಅದು ನರಿ ಕೂಗು ಗಿರಿ ಮುಟ್ಟಿತೇ ಎನ್ನುವಂತಾಗಿದೆ. ಮಾರುಕಟ್ಟೆಗೆ ಸಂಸದ ಶ್ರೇಯಸ್ ಪಟೇಲ್ ಭೇಟಿ ನೀಡಿ ಉತ್ತಮ ಬೆಲೆ ನೀಡುವಂತೆ ಸೂಚಿಸಿದರೂ ವರ್ತಕರು ಕಿವಿಗೊಡುತ್ತಿಲ್ಲ. ಮಾ.13 ರಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗು ಸ್ಥಳೀಯ ಶಾಸಕರು ದೆಹಲಿಯಲ್ಲಿ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯೆಲ್ ಅವರನ್ನು ಭೇಟಿ ಮಾಡಿ ತಂಬಾಕು ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಿ ಬೆಲೆ ಏರಿಕೆ ಮಾಡುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ.

ಕರ್ನಾಟಕದ ವರ್ಜಿನಿಯಾ ಹೊಗೆಸೊಪ್ಪು ವೈಜ್ಞಾನಿಕ ಬೆಲೆಯಿಂದ ವಂಚಿತವಾಗಿ ಕೆಲವೇ ಬಂಡವಾಳಶಾಹಿ ಕಂಪನಿಗಳ ವರ್ತಕರ ಕಪಿಮುಷ್ಟಿಗೆ ಸಿಲುಕಿ ಕಷ್ಟಪಟ್ಟು ಉತ್ಪಾದಿಸಿದ ಅನ್ನದಾತರು ಲಾಭ ಕಂಡುಕೊಳ್ಳ ಲಾಗದೆ ಆರ್ಥಿಕವಾಗಿ ನಷ್ಟ ಅನುಭವಿಸುವಂತಾಗಿದೆ ಎನ್ನುವ ಆರೋಪ ಬೆಳೆಗಾರರದ್ದಾಗಿದೆ.



ಆರಂಭದಲ್ಲಿ 320 ರೂಪಾಯಿಗೆ ತಲುಪಿದ್ದ ತಂಬಾಕಿನ ಬೆಲೆ ಮತ್ತಷ್ಟು ಏರಿಕೆ ಉಂಟಾಗಲಿದೆ ಎನ್ನುವ ಚರ್ಚೆ ಚಾಲ್ತಿಯಲ್ಲಿತ್ತು. ದುರಾದೃಷ್ಟವಶಾತ್ ಬೆಲೆ ಸುಧಾರಣೆ ಕಾಣುವುದರ ಹೊರತಾಗಿ ಇಳಿಕೆಯತ್ತ ಸಾಗುತ್ತಿದ್ದು, ಕನಿಷ್ಟ ದರ 260 ರೂ.ಗೆ ಕುಸಿತ ಕಂಡು ಬೆಳೆಗಾರರನ್ನು ಬೆಚ್ಚಿ ಬೀಳಿಸಿದೆ.

### ಖರೀದಿಗೆ ವರ್ತಕರ ಹಿಂದೇಟು

ಇನ್ನು ಕೆಳ ದರ್ಜೆಯ ತಂಬಾಕು ಖರೀದಿಸಲು ಕಂಪನಿಗಳ ವರ್ತಕರು ಹಿಂದೇಟು ಹಾಕುತ್ತಿದ್ದಾರೆ. ಎನ್ ಒಬಿಎನ್‌ಡಿಜಿ ಕ್ಯಾರಂ, ಕಪ್ಪು ತರಗು ಮತ್ತು ಸಲೈನ್ ಗ್ರೇಡ್ ಹೊಗೆಸೊಪ್ಪು ಮಾರಾಟವಾಗುತ್ತಿಲ್ಲ. ಅಂತಹ ಬೇಲ್‌ಗಳನ್ನು ರೈತರು ಮಾರಾಟಕ್ಕೆ ತರದಂತೆ ಮಾರುಕಟ್ಟೆ ಪ್ರಕಟಣೆ ಹೊರಡಿಸಿದೆ. ಸದ್ಯಕ್ಕೆ ಶೇ. 60ರಷ್ಟು ತಂಬಾಕು ಖರೀದಿಯಾಗಿದೆ. ದರ ಸುಧಾರಣೆ ಆಗುವ ಆಸೆಯಿಂದ ಹಲವಾರು ರೈತರು ತಂಬಾಕು ಮಾರಾಟಕ್ಕೆ ಆರಂಭದಲ್ಲಿ ಮುಂದಾಗಲಿಲ್ಲ. ಇದೀಗ ಬೆಲೆ ಇಳಿಕೆಯಾಗಿ ಮಾರುಕಟ್ಟೆಗೆ ಬೇಲ್‌ಗಳನ್ನು ಮಾರಾಟ ಮಾಡದೆ ರೈತರು ತಲೆಮೇಲೆ ಕೈಹೊತ್ತು ಕೂರುವಂತಾಗಿದೆ.

ಕರ್ನಾಟಕದಲ್ಲಿ ಉತ್ಪಾದಿಸುವ ಉತ್ಕೃಷ್ಟ ದರ್ಜೆಯ ವರ್ಜಿನಿಯಾ ತಂಬಾಕು ಖರೀದಿಸುವ ಕಂಪನಿಗಳ ವರ್ತಕರು ಬಹುತೇಕ ಆಂಧ್ರಪ್ರದೇಶದವರೇ ಆಗಿದ್ದು, ಬೆಲೆ ತಾರತಮ್ಯ ಎಸಗುತ್ತಿರುವುದು ಅಂಕಿ ಅಂಶಗಳನ್ನು ಗಮನಿಸಿದಾಗ ಮೇಲ್ನೋಟಕ್ಕೆ ಸ್ಪಷ್ಟವಾಗಿ ಗೋಚರಿಸುತ್ತದೆ. ಅಧಿಕಾರಿಗಳು ಮಾಹಿತಿ ನೀಡುವ ಪ್ರಕಾರ ಕಳೆದ ಬಾರಿ ಆಂಧ್ರ ಪ್ರದೇಶದಲ್ಲಿ ಒಂದು ಕೆ.ಜಿ. ಹೊಗೆಸೊಪ್ಪು ಬೆಲೆ 450 ರೂ.ಗೆ ಮಾರಾಟವಾಯಿತು. ಆದರೆ, ಅಲ್ಲಿಗಿಂತಲೂ ಉತ್ಕೃಷ್ಟ ದರ್ಜೆಯ ತಂಬಾಕು ಉತ್ಪಾದಿಸುವ ಕರ್ನಾಟಕದ ವರ್ಜಿನಿಯಾ ಹೊಗೆಸೊಪ್ಪು ಬೆಲೆ ಆಂಧ್ರಕ್ಕೆ ಹೋಲಿಸಿದರೆ ತೀರ ಕಡಿಮೆ. ಈ ಬಾರಿ ಆಂಧ್ರ ಪ್ರದೇಶದಲ್ಲಿ ಸಿಕ್ಕಷ್ಟೇ ದರ ಇಲ್ಲಿಯೂ ಸಿಗಲಿದೆ ಎನ್ನುವ ಆಶಾಭಾವನೆ ಹೊಂದಿದ್ದ ರೈತರಿಗೆ ಬೆಲೆ ಕುಸಿತ ತಣ್ಣೀರೆರಚಿದೆ.

ದೇಶದಲ್ಲಿ ಮೊದಲಿಗೆ ಆಂಧ್ರ ಪ್ರದೇಶದಲ್ಲಿ ತಂಬಾಕು ಉತ್ಪಾದಿಸುತ್ತಿದ್ದು, ಅಲ್ಲಿನ ವರ್ತಕರು ಮಾರುಕಟ್ಟೆಯಲ್ಲಿ ಖರೀದಿಸಿದ ಹೊಗೆಸೊಪ್ಪನ್ನು ವಿದೇಶಗಳಿಗೆ ರಫ್ತು ಮಾಡುತ್ತಿದ್ದರು. ತದನಂತರ ಹೊಗೆಸೊಪ್ಪು ಬೆಳೆ ಈ ಭಾಗಕ್ಕೆ ಕಾಲಿಟ್ಟ ಬಳಿಕ ಇಲ್ಲಿನ ಮಾರುಕಟ್ಟೆಗಳಲ್ಲಿಯೂ ಆಂಧ್ರ ಪ್ರದೇಶದ ವರ್ತಕರು ತಂಬಾಕು ಖರೀದಿಸಲಾರಂಭಿಸಿದರು. ಅಂದಿನಿಂದಲೂ ಎರಡು ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಬೆಲೆಯಲ್ಲಿ ತಾರತಮ್ಯ ಮಾಡುತ್ತಿರುವುದು ಎದ್ದು ಕಾಣಿಸುತ್ತಿದೆ. ಈ ಭಾಗದಲ್ಲಿ ಮಾರುಕಟ್ಟೆ ಮೇಲೆ ಹಿಡಿತ ಸಾಧಿಸಿದ ವರ್ತಕರು ಮನಸ್ಸೋ ಇಚ್ಛೆ ಬೆಲೆಗೆ ಖರೀದಿಸಲಾರಂಭಿಸಿದರು. ಬೆಳೆಗಾರರ ಹಿತ ಕಾಯಬೇಕಿದ್ದ ತಂಬಾಕು ಮಂಡಳಿ ಕೈಕಟ್ಟಿ ಕುಳಿತಿರುವುದು ಗುಟ್ಟೇನಲ್ಲ. ತಂಬಾಕು ಕೊಳ್ಳುವ ಇತರೆ ಕಂಪನಿಗಳಿಗೆ ಹೋಲಿಕೆ ಮಾಡಿದರೆ ಐಟಿಸಿ ಕಂಪನಿ ಅಧಿಕವಾಗಿ ಖರೀದಿಸುತ್ತಿದ್ದು, ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರದ ಮೇಲೂ ಬಿಗಿ ಹಿಡಿತ ಸಾಧಿಸುತ್ತಿದೆ.

ಈ ಬಾರಿ ಮಾರುಕಟ್ಟೆಯಲ್ಲಿ ಹಿಂದೆಂದೂ ಕಂಡರಿಯದಷ್ಟು ಬೆಲೆ ಪಾತಾಳ ಕಂಡಿದೆ. ಬೆಲೆ ಕುಸಿತದಿಂದ ರೋಸಿ ಹೋದ ರೈತರು ಹಲವಾರು ಸಲ ಮಾರುಕಟ್ಟೆ ಬಂದ್ ಮಾಡಿಸಿ ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದರೂ ದರ ಏರಿಕೆ ಮಾಡದೆ ವರ್ತಕರು ಕ್ಯಾರೆ ಎನ್ನುತ್ತಿಲ್ಲ.

## ಇಂದು ವಿಶ್ವ ಗ್ರಾಹಕರ ದಿನಾಚರಣೆ

**ಹಾಸನ :** ನಗರದ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾ.23 ರ ಸೋಮವಾರ ಬೆಳಿಗ್ಗೆ 10.30ಕ್ಕೆ ವಿಶ್ವ ಗ್ರಾಹಕರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಸಿ.ಎಂ.ಚಂಚಲ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ ಮುಂತಾದವರು ಭಾಗವಹಿಸಲಿದ್ದಾರೆ.

# ಮಾ.30 ರಂದು ಫಲಾನುಭವಿಗಳಿಗೆ ಮನೆಗಳ ವಿತರಣೆ

• ಪ್ರಜೋದಯ ವರದಿ

**ಅರಸೀಕೆರೆ :** ಹೌಸಿಂಗ್ ಫಾರ್ ಆಲ್ ಯೋಜನೆ ಅಡಿ ನಗರ ವ್ಯಾಪ್ತಿಯಲ್ಲಿ ಈಗಾಗಲೇ ನಿರ್ಮಾಣವಾಗಿರುವ 328 ಮನೆಗಳನ್ನು ಮಾರ್ಚ್ 30 ರಂದು ಫಲಾನುಭವಿಗಳಿಗೆ ವಿತರಿಸಲಾಗುವುದೆಂದು ರಾಜ್ಯ ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷರೂ ಆದ ಶಾಸಕ ಕೆ.ಎಂ. ಶಿವಲಿಂಗೇಗೌಡ ಸಿಹಿ ಸುದ್ದಿಯನ್ನು ನಗರದ ವಸತಿ ರಹಿತರಿಗೆ ನೀಡಿದರು.

ನಗರ ಸಭೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ವಸತಿ ರಹಿತರಿಗೆ ಸೂರು ನಿರ್ಮಿಸಿ ಕೊಡುವ ದಶಕದ ಕನಸು ಕೊನೆಗೂ ನನಸಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಯುಕ್ತ ಆಶಯದಲ್ಲಿ ಫಲಾನುಭವಿಯಿಂದಲೂ ಒಂದು ಲಕ್ಷ ಸ್ವೀಕರಿಸಿ ಈಗಾಗಲೇ ಸಿದ್ದವಾಗಿರುವ ಮನೆಗಳು ಸಕಲ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ. ಮುಂದಿನ ದಿನಗಳಲ್ಲಿ ಇದೊಂದು ಮಾದರಿ ಬಡಾವಣೆ ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಬಡವರು ಹಾಗೂ ನಿರ್ಗತಿಕರಿಗೆ ಸದೃಢ ಮನೆಯೊಂದನ್ನು ನಿರ್ಮಿಸಿ ಕೊಡುವ ಸಂಕಲ್ಪದೊಂದಿಗೆ ಹೌಸಿಂಗ್ ಫಾರ್ ಆಲ್ ಯೋಜನೆಯನ್ನು ಕೈಗೆತ್ತುಕೊಂಡು, 1181 ಮನೆಗಳನ್ನು ನಿರ್ಮಿಸುವ ಮಹತ್ವಕಾಂಕ್ಷಿ ಯೋಜನೆಯಲ್ಲಿ ಮೊದಲ ಹಂತವಾಗಿ 328 ಮನೆಗಳು ಪೂರ್ಣಗೊಂಡು ಫಲಾನುಭವಿಗಳ ವಿತರಣೆಗೆ ಸಿದ್ದವಾಗಿವೆ. ಇನ್ನು 412 ಮನೆಗಳಿಗೆ ಆರ್‌ಸಿಸಿ ಹಾಕಲಾಗಿದು 252 ಮನೆಗಳ ಕಾಮಗಾರಿ ಪ್ರಗತಿಯಲ್ಲಿದೆ. ಆದರೆ ಫಲಾನುಭವಿಗಳೇಕೋ ಮನೆ


» ನಾಲ್ಕನೇ ಪುಟದಲ್ಲಿ


## ಕಾಡಾನೆ ಸಂಚಾರ: ಎಚ್ಚರ ವಹಿಸಲು ಸೂಚನೆ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ಮತ್ತು ಬೇಲೂರು ತಾಲ್ಲೂಕು ವಿವಿಧ ಭಾಗದಲ್ಲಿ ಕಾಡಾನೆಗಳು ಕಾಣಿಸಿಕೊಂಡಿವೆ. ಸುತ್ತಮುತ್ತಲಿನ ಗ್ರಾಮಸ್ಥರು ಎಚ್ಚರಿಕೆಯಿಂದ ವಹಿಸಿ, ತುರ್ತು ಸಂದರ್ಭದಲ್ಲಿ ಇಟಿಎಫ್ ಕಂಟ್ರೋಲ್ ರೂಮ್ 9480817460, 9481991326 ಸಂಪರ್ಕಿಸುವಂತೆ ತಿಳಿಸಿದೆ.

ಬೇಲೂರು ತಾಲ್ಲೂಕಿನ ಕಾನಹಳ್ಳಿ ಫಾರೆಸ್ಟ್ ಕಾನಹಳ್ಳಿ, ಮಂಜಪ್ಪ ರೈಟ್ರು ಕಾಡು ಕಾಸರಹಳ್ಳಿ, ಪುಟ್ಟಸ್ವಾಮಿ ಗೌಡರ ತೋಟ ಹಂಜಿಹಳ್ಳಿ, ಬೇಡಿ ಅವರ ತೋಟ ಸಮೀಪ ರಾಜೇಗೌಡರ ತೋಟ ಹಾಗು ಕೊಗೋಡು ಸುತ್ತಮುತ್ತ ಕಾಡಾನೆಗಳು ಕಂಡುಬಂದಿವೆ.

ಸಕಲೇಶಪುರ ತಾಲ್ಲೂಕಿನ ಹೆತ್ತೂರು ಮತ್ತು ಯಸಳೂರು ಹೋಬಳಿ ವ್ಯಾಪ್ತಿಯ ಮರ್ಜನಹಳ್ಳಿ, ಕಲ್ಲುತೋಟ, ಪಟ್ಲ ಗ್ರಾಮದ ಕಪ್ಪಿನಕುಡಿ, ಕಿರ್ಕಳ್ಳಿ ಗ್ರಾಮದ ಹಂಚ್ ಹನಲ್, ಚಿಕ್ಕಂದೂರು ಗ್ರಾಮದ ಅಕೇಶಿಯ ನಡುತೋಪು, ಮೆಕ್ಕಿರಮನೆ ಗ್ರಾಮದ ಹೆಗ್ಗೋಡ್ಲು, ಐಗೂರು ಗ್ರಾಮದ ನಿರ್ಮಾ ಎಸ್ಟೇಟ್, ಹೊಂಗಡಹಳ್ಳ ಗ್ರಾಮದ ದೊಡ್ಡಗದ್ದೆ ಹೊರಟಿ ಸುತ್ತಮುತ್ತ ಕಾಡಾನೆಗಳ ಸಂಚಾರ ಕಂಡುಬಂದಿದೆ.

## 2442 ಶಾಲೆಗಳ ಪೈಕಿ 1385 ಶಾಲೆಗೆ ಖಚಿತ ದಾಖಲೆ | ಪರಿಗಣಿಸಬೇಕಿದೆ ಇಲಾಖೆ

# 1057 ಸರ್ಕಾರಿ ಶಾಲೆಗಳಿಗೆ ಇನ್ನೂ ಆಗದ ಖಾತೆ

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ಶಾಲೆಯ ಹೆಸರಿಗೆ ಜಮೀನು ಖಾತೆ ಮಾಡಿಕೊಳ್ಳುವಂತೆ ಶಿಕ್ಷಣ ಇಲಾಖೆ ಹಾಗು ಕಂದಾಯ ಇಲಾಖೆ ಸೂಚನೆ ಹೊರಡಿಸಿದ್ದರೂ ಜಿಲ್ಲೆಯ 1057 ಶಾಲೆಗಳಿಗೆ ಇನ್ನೂ ಖಾತೆ ಹೊಂದಲು ಸಾಧ್ಯವಾಗಿಲ್ಲ.

ಸರ್ಕಾರಿ ಶಾಲೆಗಳ ಸ್ಥಿರಾಸ್ತಿಗಳನ್ನು ಆಯಾ ಶಾಲೆಗಳ ಹೆಸರಿಗೆ ಖಾತೆ ಮಾಡಿಸಿ ಆರ್‌ಟಿಸಿಯಲ್ಲಿ ನಮೂದಿಸಿ ಕೊಡುವಂತೆ ರಾಜ್ಯ ಶಿಕ್ಷಣ ಇಲಾಖೆ, ಕಂದಾಯ ಇಲಾಖೆ 2018ರ ಏ. 28ರಂದು ಆದೇಶಿಸಿದೆ. ಈ ಕುರಿತು ಜಿಲ್ಲಾಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗಿದೆಯಾದರೂ 6 ವರ್ಷದಲ್ಲಿ 1385 ಶಾಲೆಗಳಿಗೆ ಮಾತ್ರ ಖಾತೆ ಮಾಡಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಒಟ್ಟು 2442 ಸರ್ಕಾರಿ ಪ್ರಾಥಮಿಕ ಹಾಗು ಪ್ರೌಢ ಶಾಲೆಗಳಿವೆ.



ಮಲ್ಲಿಕಾರ್ಜುನ ಕೊಬ್ಬರಗಿ

### ತಾಲ್ಲೂಕುವಾರು ವಿವರ

ಆಲೂರು ತಾಲ್ಲೂಕಿನಲ್ಲಿ 167 ಶಾಲೆಗಳಿದ್ದು, 83 ಶಾಲೆಗಳ ಖಾತೆ ಆಗಿದೆ. 84 ಶಾಲೆಗಳಿಗೆ ಇನ್ನೂ ಖಾತೆ ಆಗಬೇಖಿದ್ದು ಗ್ರಾಪಂ ವ್ಯಾಪ್ತಿಯಲ್ಲಿ 12, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2 ಹಾಗು ತಹಶೀಲ್ದಾರ್ ಖಾತೆ ಮಾಡಬೇಕಾದ ಶಾಲೆಗಳ ಸಂಖ್ಯೆ 70 ಇದೆ. ಅರಕಲಗೂಡು ತಾಲ್ಲೂಕಿನ 355 ಶಾಲೆಗಳ ಪೈಕಿ 238 ಶಾಲೆಗೆ ಖಾತೆಯಾಗಿದ್ದು, 117 ಶಾಲೆಗಳ ಭವಿಷ್ಯ ಇನ್ನು ಅತಂತ್ರವಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 7, ಪಟ್ಟಣ ಪಂಚಾಯಿತಿ 11 ಹಾಗು ತಹಶೀಲ್ದಾರ್ ಕಚೇರಿಯಲ್ಲಿ 99 ಶಾಲೆಗಳ ಕಡತಗಳಿವೆ. ಅರಸೀಕೆರೆ ತಾಲ್ಲೂಕಿನಾದ್ಯಂತ 404 ಶಾಲೆಗಳಿದ್ದು 237 ಖಾತೆ ಹೊಂದಿವೆ. 167 ಶಾಲೆಗಳಿಗೆ ಖಾತೆ ಆಗಬೇಕಿದ್ದು, ಗ್ರಾಮ ಪಂಚಾಯಿತಿಗೆ 45, ನಗರಸಭೆ 7 ಹಾಗು 115 ಶಾಲಾ ದಾಖಲಾತಿ ತಹಶೀಲ್ದಾರ್ ಕಚೇರಿಯಲ್ಲಿವೆ. ಬೇಲೂರಿನ 280 ಶಾಲೆ ಪೈಕಿ 101 ಶಾಲೆಗೆ ಖಾತೆ ಆಗಿದ್ದು, ಇನ್ನೂ 179 ಶಾಲೆಗಳು ಬಾಕಿ ಇವೆ. ಗ್ರಾಮ ಪಂಚಾಯಿತಿ 60, ಪುರಸಭೆ 2 ಹಾಗು ತಹಶೀಲ್ದಾರ್ 117 ಕಡತಗಳ ವಿಲೇವಾರಿ ಮಾಡಬೇಕಿದೆ. ಮೂರು ಶಾಲೆಗಳ ಜಾಗದ ವಿಚಾರ ನ್ಯಾಯಾಲಯ ಮೆಟ್ಟಿಲೇರಿದೆ.

ಚನ್ನರಾಯಪಟ್ಟಣ ತಾಲ್ಲೂಕಿನ 379 ಶಾಲೆಗಳ ಪೈಕಿ 169 ಶಾಲೆಗಳು ಖಾತೆ ಹೊಂದಿದ್ದು, 210 ಶಾಲೆಗಳಿಗೆ ಖಾತೆ ಆಗಿಲ್ಲ. ಹಾಸನ ತಾಲ್ಲೂಕಿನ 386 ಶಾಲೆಗಳ ಪೈಕಿ 250 ಶಾಲೆಗಳು ಖಾತೆ ಹೊಂದಿವೆ. 136 ಶಾಲೆಗಳು ಇನ್ನು ಪ್ರಗತಿ ಹಂತದಲ್ಲಿದ್ದು, ಗ್ರಾಮ ಪಂಚಾಯಿತಿಗೆ 16, ಮಹಾನಗರ ಪಾಲಿಕೆ ವ್ಯಾಪ್ತಿಗೆ 22 ಹಾಗು ತಹಶೀಲ್ದಾರ್ ವ್ಯಾಪ್ತಿಗೆ 98 ಶಾಲೆಗಳು ಸೇರಿವೆ. ಹೊಳೆನರಸೀಪುರದ 303 ಶಾಲೆಗಳ ಪೈಕಿ 267 ಶಾಲೆಗೆ ಖಾತೆ ಮಾಡಿಕೊಡಲಾಗಿದೆ. ಬಾಕಿ ಇರುವ 36 ಶಾಲೆಗಳಲ್ಲಿ 21 ಗ್ರಾಮ ಪಂಚಾಯಿತಿ, 8 ಪುರಸಭೆ ಹಾಗು 7 ಶಾಲೆಗಳು ತಹಶೀಲ್ದಾರ್ ಕಡೆಯಿಂದ ಖಾತೆ ಆಗಬೇಕಿದೆ. ಸಕಲೇಶಪುರ ತಾಲ್ಲೂಕಿನ 168 ಶಾಲೆಗಳ ಪೈಕಿ 40 ಶಾಲೆಗಳು ಖಾತೆ ಹೊಂದಿದ್ದರೆ 128 ಶಾಲೆಗಳ ಖಾತೆ ಆಗಬೇಕಿದೆ. ಅದರಲ್ಲಿ ಗ್ರಾಮ ಪಂಚಾಯಿತಿಗೆ 5, ಪುರಸಭೆಯಲ್ಲಿ 6 ಹಾಗು 117 ಶಾಲೆಗಳು ತಹಶೀಲ್ದಾರ್ ಕಡೆಯಿಂದ ಸುಖಾಂತ್ಯ ಕಾಣಬೇಕಿದೆ.

### ಶಿಕ್ಷಣದ ಮೇಲೆ ಪರಿಣಾಮ

ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಭೂಮಿ, ಕಟ್ಟಡ, ಕ್ರೀಡಾಂಗಣ, ಕುಡಿಯುವ ನೀರು, ಶೌಚಾಲಯ ಮುಂತಾದ ಆಸ್ತಿಗಳ ಸ್ಪಷ್ಟ ದಾಖಲೆಗಳು ಲಭ್ಯವಿಲ್ಲ. ಕೆಲವು ಕಡೆ ಶಾಲಾ ಜಾಗದ ಮೇಲೆಯೇ ವಿವಾದಗಳು ಹುಟ್ಟಿಕೊಂಡಿರುವುದೂ ಕಂಡು ಬರುತ್ತಿದೆ.

ಅದರ ಪರಿಣಾಮವಾಗಿ ಶಿಕ್ಷಕರ ಮೇಲೆ ಹೆಚ್ಚುವರಿ ಹೊರೆ ಬಿದ್ದಿದೆ. ಪಾಠ ಬೋಧನೆ ಮಾಡಬೇಕಾದ ಶಿಕ್ಷಕರು ಈಗ ದಾಖಲೆಗಳನ್ನು ಸಂಗ್ರಹಿಸುವುದು, ಅಧಿಕಾರಿಗಳ ಮುಂದೆ ವಿವರ ನೀಡುವುದು, ದಾಖಲೆ ಪರಿಶೀಲನೆಗೆ ಹಾಜರಾಗುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಳ್ಳಬೇಕಾಗಿದೆ. ಹೀಗಾಗಿ ಮಕ್ಕಳ ವ್ಯಾಸಂಗದ ಮೇಲೆ ಗಮನ ಕೇಂದ್ರಿಕರಿಸಲು ಸಾಧ್ಯವಾಗುತ್ತಿಲ್ಲ.

ಶಾಲೆಯ ಮುಖ್ಯ ಗುರಿಯಾದ ಮಕ್ಕಳ ಕಲಿಕೆ ಮತ್ತು ಅಭಿವೃದ್ಧಿ ಹಿಂದುಳಿಯುತ್ತಿದೆ. ವಿಶೇಷವಾಗಿ ಗ್ರಾಮೀಣ ಭಾಗದ ಶಾಲೆಗಳಲ್ಲಿ ಈ ಸಮಸ್ಯೆ ತೀವ್ರವಾಗಿದೆ. ಸರ್ಕಾರಿ ಶಾಲೆಗಳ ಖಾತೆ ಹೊಂದುವುದು ಕಡ್ಡಾಯವೆಂದು ಸರ್ಕಾರ ಆದೇಶಿಸಿದ್ದರೂ ಈ ನಿಟ್ಟಿನಲ್ಲಿ ವೇಗದ ಕೆಲಸ ನಡೆಯುತ್ತಿಲ್ಲ. ಅಧಿಕಾರಿಗಳು ಸೂಚಿಸಿದಾಗ, ನ್ಯಾಯಾಲಯ ವಿಚಾರಣೆ ಇದ್ದಾಗ ಮಾತ್ರ ಶಿಕ್ಷಕರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿದ್ದಾರೆ ಹೊರತು ಬೇರೆ ಸಮಯದಲ್ಲಿ ಆ ಕಡೆಗೆ ಯೋಚಿಸುತ್ತಿಲ್ಲವೆಂಬ ಆರೋಪಗಳು ಕೇಳಿಬಂದಿವೆ.

## ಏ.2,3 ರಂದು ಕೊಂಡಜ್ಜಿ ಜಾತ್ರೆ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಸಾಲಗಾಮೆ ಹೋಬಳಿ ಕೊಂಡಜ್ಜಿ ಗ್ರಾಮದಲ್ಲಿ ಶ್ರೀ ಶಕುನ ರಂಗನಾಥಸ್ವಾಮಿ, ದ್ಯಾವಮ್ಮ ದೇವಿ, ಸರಪಳಿ ಕೆಂಚರಾಯಸ್ವಾಮಿ ಹಾಗು ಗಾಳಿಕೆರೆ ಕೆಂಚರಾಯ ಸ್ವಾಮಿಯ 6ನೇ ವರ್ಷದ ಜಾತ್ರಾ ಮಹೋತ್ಸವ ಏ.2 ಮತ್ತು 3ರಂದು ನಡೆಯಲಿದೆ.

ಏ.2ರಂದು ಬೆಳಿಗ್ಗೆ 6.30ಕ್ಕೆ ರಾಮದೇವರಹಳ್ಳದಲ್ಲಿ ದೃಷ್ಟಿ ಪೂಜೆ ಮತ್ತು ಪಂಚಾಮೃತ ಅಭಿಷೇಕ ನಡೆಯಲಿದೆ. ನಂತರ ಸಂಜೆ 4 ಗಂಟೆಗೆ ಲಕ್ಷ್ಮೀ ವರದ ರಾಜಸ್ವಾಮಿಗೆ ವಿಶೇಷ ಪಂಚಾಮೃತ ಅಭಿಷೇಕ ಮತ್ತು 101 ಎಡೆ ಅರಿಸೇವೆ ನಡೆ ಯಲಿದೆ. ಸಂಜೆ 5 ಗಂಟೆಗೆ ಚಾಮದೇವರ ಉತ್ಸವ ನಡೆಯಲಿದೆ. ರಾತ್ರಿ ಅನ್ನದಾನ ವ್ಯವಸ್ಥೆ ಮಾಡಲಾಗಿದೆ. ಏ.3ರಂದು ಸರಪಳಿ ಕೆಂಚರಾಯ ಸ್ವಾಮಿ, ಗಾಳಿಕೆರೆ ಕೆಂಚರಾಯಸ್ವಾಮಿ ಮತ್ತು ಚಾಮುಂಡೇಶ್ವರಿ ದೇವಿಗೆ ಪಂಚಾಮೃತ ಅಭಿಷೇಕ ಮತ್ತು ದೃಷ್ಟಿ ಪೂಜೆ ನಡೆಯಲಿದೆ.

# ಸರ್ಕಸ್ಸು..... ಸರ್ಕಸ್ಸು



ಸರ್ಕಸ್ಸು ಮುಗಿದರೂ ಅವನು ಅಲ್ಲಿಯೇ ಕುಳಿತಿದ್ದ. ಎಲ್ಲಾ ಎದ್ದು ಹೋಗಿದ್ದರು. ಎರಡನೇ ಶೋ ಆರಂಭವಾಗಲು ಕೆಲವೇ ಸಮಯ ಉಳಿದಿತ್ತು. ಅವನ ಕಣ್ಣುಗಳು ಏನನ್ನೋ ಹುಡುಕುತ್ತಿದ್ದವು. ಆ ಸರ್ಕಸ್ಸಿನ ಹುಡುಗಿ ಪ್ರವೇಶಿಸಿ ಓಡಿ ಬಂದು ಎರಡು ಬಾರಿ ಲಾಗಾ ಹಾಕಿ ಇವನ ಮುಂದೆಯೇ ನಿಂತಂತಾಯಿತು. ಆಕೆಯನ್ನು ಕಂಡು ಇವನು ಹಲ್ಲೋ ಎಂದು ಜೋರಾಗಿ ಕೂಗಿದ್ದು, ಅವಳು ಇವನನ್ನು ನೋಡಿ ತನ್ನ ಕಾರ್ಯದಲ್ಲಿ ತೊಡಗಿದ್ದು, ಅವನು ತನ್ನ ಕಣ್ಣು ಮಿಟುಕಿಸದೇ ಎವೆಯಿಕ್ಕದೆ ಅವಳನ್ನು ನೋಡುತ್ತಿದ್ದದ್ದು, ಅರ್ಧ ತಾಸಿನವರೆಗೂ ಆಕೆ ಸರ್ಕಸ್ಸು ಮಾಡಿ ಒಳ ಸೇರಿದ್ದು, ಆಕೆಯ ಭ್ರಾಮಾ ಲೋಕದಲ್ಲಿ ಮುಳುಗಿದ್ದ ಅವನನ್ನು ಸರ್ಕಸ್ಸಿನ ಮಾಲಿಕ ಬಂದು ಅಲುಗಾಡಿಸಿದಾಗಲೇ ಅವನು ವಾಸ್ತವ ಲೋಕಕ್ಕೆ ಮರಳಿ

''ಅಂ! ಯಾರು? ಬಿಡಿ ನನ್ನ'' ಎಂದ.

''ಅಲ್ಲಯ್ಯ ಸರ್ಕಸ್ಸು ಮುಗಿದು ಬಹಳ ಹೊತ್ತಾಯಿತು. ಎರಡನೇ ಶೋ ಕೂಡ ಇನ್ನೇನು ಆರಂಭವಾಗುತ್ತದೆ. ಎದ್ದು ಹೊರಗೆ ಹೋಗು'' ಎಂದಾಗ ಆಗಲೇ ಹೊರಗಡೆ ಟಿಕೆಟ್ ಕೊಡುತ್ತಿದ್ದರು. ಅವನು ತಕ್ಷಣ ಹೊರ ನಡೆದು ಎರಡನೇ ಶೋಗೆ ಟಿಕೆಟ್ ತೆಗೆದುಕೊಂಡು ಮತ್ತೊಮ್ಮೆ ಸರ್ಕಸ್ಸನ್ನು ನೋಡಲು ಅದೇ ಸ್ಥಳದಲ್ಲಿಯೇ ಬಂದು ಕುಳಿತ.

ಸರ್ಕಸು ಆರಂಭವಾಯಿತು ಅವಳು ಯಾವಾಗ ಹೊರ ಬರುವಳೋ ಎಂದು ಇವನು ಚಡಪಡಿಸುತ್ತಿದ್ದಂತೆ ಸರ್ಕಸ್ಸಿನ ಅಖಾಡವನ್ನು ಪ್ರವೇಶಿಸಿದಳು. ಅವಳು ಲಾಗಾ ಹಾಕಿ ಅದೇ ಸ್ಥಳಕ್ಕೆ ಬಂದು ನಿಂತಳು. ಇವನು ಪುನಃ ಹಲ್ಲೋ ಎಂದು ಕೈಬೀಸಿ ವಿಷ್ ಮಾಡಿದ, ಅವಳ ದೃಷ್ಟಿ ಇವನ ಮೇಲೆ ಬಿತ್ತು. ಮುಖವರಳಿತು. ಪುಳುಕಿತಗೊಂಡ. ಅವನ ಕಣ್ಣು ಅವಳನ್ನು ನೋಡುತ್ತಲೇ ಇತ್ತು. ಮರಳಿ ಹೋಗುವಾಗ ಒಮ್ಮೆ ತಿರುಗಿ ಆ ಕುಡಿ ಮೀಸೆ ತರುಣನನ್ನು ನೋಡಿ ಅವಳು ಪರದೆಯಾಚೆಗೆ ಮರೆಯಾದಳು. ಅವನಿಗೆ ತಡೆಯಲಾರದಷ್ಟು ಸಂತೋಷವಾಯಿತು. ಸರ್ಕಸ್ಸು ಮುಗಿಯಿತು. ಎಲ್ಲರೂ ಹೋದರು. ಒಲ್ಲದ ಮನಸ್ಸಿನಿಂದ ಇವನು ಕೂಡ ಮನೆಗೆ ನಡೆದ.

ಸರಿ ರಾತ್ರಿಯಾಗಿತ್ತು. ಮನೆಯಲ್ಲಿ ಎಲ್ಲರೂ ಮಲಗಿದ್ದರು. ತಾಯಿ ಮಾತ್ರ ಊಟ ಮಾಡದೇ ಮಗನಿಗಾಗಿ ಕಾಯುತ್ತಿದ್ದಳು. ತಾಯಿ ಮಗನಿಗೆ ತಟ್ಟೆ ಇಟ್ಟು ಅನ್ನಸಾರು ಬಡಿಸಿದಳು. ಅವನಿಗೆ ಊಟ ಸೇರದೇ ಅರ್ಧಕ್ಕೆ ಕೈತೊಳೆದು ಎದ್ದ. ತಾಯಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸದೇ ಹೋಗಿ ಮಲಗಿದ. ಎತ್ತ ಹೊರಳಿದರೂ ಆಕೆಯದ್ದೇ ನೆನಪು. ಅವಳು ಸರ್ಕಸ್ಸಿನ ಅಖಾಡದಲ್ಲಿ ಮೈಮುರಿದು ಮಾಡಿದ ಸರ್ಕಸ್ಸು ಅವನ ಕಣ್ಣ ಮುಂದೆ ಒಂದೊಂದಾಗಿ ಬರ ತೊಡಗಿದವು. ಅವನಮ್ಮ ಬಂದು ಎಚ್ಚರಿಸಿದಾಗಲೇ ಅವನಿಗೆ ಎಚ್ಚರವಾದದ್ದು. ಅವನಿಗೆ ಯಾವಾಗಲೋ ನಿದ್ದೆ ಬಂದದ್ದು ಗೊತ್ತಿರಲಿಲ್ಲ.

ಬೆಳಿಗ್ಗೆ ತನ್ನೆಲ್ಲ ಕೆಲಸ ಮುಗಿಸಿ ಕಾಲೇಜಿಗೆ ನಡೆದ, ಯಾರೊಂದಿಗೂ ಮಾತಿಲ್ಲ. ಮೌನವಾಗಿದ್ದ, ಒಬ್ಬನೇ ಇರಲು ಪ್ರಯತ್ನಿಸುತ್ತಿದ್ದ. ತರಗತಿಗೆ ಹೋದಾಗಲೂ ಪಾಠವೂ ರುಚಿಸಲಿಲ್ಲ. ಅಲ್ಲಿಯೂ ಬಹಳ ಹೊತ್ತು ಕೂರಲಾಗದೇ ಹೊರ ಬಂದು ಕಾಲೇಜು ಕ್ಯಾಂಟೀನಿಗೆ ಹೋಗಿ ಒಂದು ಲೋಟ ಕಾಫಿ ಹೀರಿ ಕಾಲೇಜು ಆವರಣದಲ್ಲಿದ್ದ ಹೊಂಗೆ ಮರದ ನೆರಳಿನಲ್ಲಿ ಕುಳಿತುಕೊಂಡ. ಮತ್ತದೇ ನೆನಪುಗಳು ಸ್ಮೃತಿ ಪಟಲದ ಮೇಲೆ ಬರತೊಡಗಿದವು. ಅಲ್ಲಿಯೂ ಹೆಚ್ಚು ಹೊತ್ತು ಕೂರಲಾಗದೇ ಮನೆಗೆ ಹೋದಾಗ ಸಂಜೆ ನಾಲ್ಕು ಘಂಟೆಯಾಗಿತ್ತು. ಅಮ್ಮ ಊಟ ಹಾಕಿದಳು. ಹೆಚ್ಚು ಊಟ ಮಾಡಲಾರದೇ ಅರ್ಧಕ್ಕೆ ಬಿಟ್ಟು ಎದ್ದ. ಏನೋ ರಾತ್ರಿಯೂ ಊಟ ಮಾಡಲಿಲ್ಲ. ಈಗಲೂ ಇಲ್ಲ. ಹೀಗೆ ಊಟ ಬಿಟ್ಟರ ಗತಿ ಏನು? ಎಂದು ಅವನಮ್ಮ ಕೇಳಿದರೆ ಅದಕ್ಕವನು ಮಾತನಾಡದೇ ಹೊರ ನಡೆದ. ಸರ್ಕಸ್ಸಿನ ಟೆಂಟಿನ ಬಳಿ ಬಂದ. ಮೊದಲನೇ ಶೋಗೆ ಇನ್ನೂ ಕೊಂಚ ಸಮಯವಿತ್ತು. ಆ ಸಂದರ್ಭದಲ್ಲಿ ಟೆಂಟಿನ ಸುತ್ತಲೂ ಓಡಾಡಿದ. ಎಲ್ಲಿ ಯಾದರೂ ಅವಳ ಮುಖ ಕಂಡಿತೆಂದು ಆಚೀಚೆ ನೋಡಿದ, ಅವಳು ಕಾಣಲಿಲ್ಲ. ಅಲ್ಲಿಯೇ ಇದ್ದ ಹೂವಿನ ಅಂಗಡಿಯಲ್ಲಿ ಅರ್ಧ ಅರಳಿದ ಗುಲಾಬಿ ಮೊಗ್ಗೊಂದನ್ನು ಖರೀದಿಸಿದ. ಅಷ್ಟರಲ್ಲಿಯೇ ಟಿಕೆಟ್ ಕೊಡಲಾರಂಭಿಸಿದರು. ತಾನೂ ಟಿಕೆಟ್ ಪಡೆದು ಗುಲಾಬಿ ಹೂವಿನೊಂದಿಗೆ ಒಳನಡೆದು ಹಿಂದೆ ಎಲ್ಲಿ ಕುಳಿತಿದ್ದನೋ ಅದೇ ಸ್ಥಳದಲ್ಲಿಯೇ ಕುಳಿತು ಅವಳಿಗಾಗಿ ಕಾಯತೊಡಗಿದ.

ಸರ್ಕಸ್ಸು ಆರಂಭವಾಯಿತು. ಒಬ್ಬೊಬ್ಬರಾಗಿ, ಇಬ್ಬಿಬ್ಬರಾಗಿ, ಮೂರು ಜನರ ತಂಡಗಳಾಗಿ ಬಂದು ತಮ್ಮ ತಮ್ಮ ಸರದಿಯಂತೆ ಸರ್ಕಸ್ ಮುಗಿಸಿ ಹೋದರು.

ಈಗ ಜೋಕಾಲಿ ಜೀಕುವುದರೊಂದಿಗೆ ಏಣಿಯಲ್ಲಿ ಸರ್ಕಸ್ ಮಾಡುವುದಾಗಿತ್ತು. ಜೋಕಾಲಿ ಕೆಳಗೆ ದೊಡ್ಡದೊಂದು ಬಲೆಯನ್ನು ಕಟ್ಟಿದ್ದರು, ಜೋಕಾಲಿ ಜೀಕಲು ಎಲ್ಲಾ ಅಣಿಯಾಗಿತ್ತು. ಇವನ ಕಣ್ಣು ಯಾರಾರು ಬರುವರೆಂದು ಪರದೆ ಕಡೆಗೆ ಇತ್ತು. ಪರದೆ ಸರಿಸಿ ಬಫೂನ್‌ಗಳು ವಿವಿಧ ವೇಷ ಭೂಷಣಗಳೊಂದಿಗೆ ಸರ್ಕಸ್ ಅಖಾಡಕ್ಕೆ ಬಂದರು. ಲಾಗಾ ಹಾಕಿದರು. ಕೇಕೆ ಹಾಕಿ ಕುಣಿದು ಕುಪ್ಪಳಿಸಿದರು. ಒಬ್ಬರನ್ನೊಬ್ಬರು ಒದ್ದುಕೊಂಡರು. ತಮ್ಮ ನೋವನ್ನು ನುಂಗಿಕೊಂಡು ಜನರನ್ನು ನಗಿಸುತ್ತಾ, ಮಕ್ಕಳನ್ನು ನಗೆಗಡಲಲ್ಲಿ ತೇಲಿಸುತ್ತಿದ್ದರು. ಅವರು ಮಾಡುತ್ತಿದ್ದ ಜೋಕುಗಳಿಗೆ ಮಕ್ಕಳು ನಗುವುದನ್ನು ನಿಲ್ಲಿಸುತ್ತಲೇ ಇರಲಿಲ್ಲ. ಕೊನೆಗೆ ಈ ಬಫೂನಗಳೆಲ್ಲಾ ಜೋಕಾಲಿ ಜೀಕಿದರು. ಮೇಲಿಂದ ಕೆಳಕ್ಕೆ ನೆಗೆದರು. ಬಿದ್ದರು ಕೆಳಗಡೆ ಬಲೆ ಕಟ್ಟಿದ್ದರಿಂದ ಪೆಟ್ಟಾಗುತ್ತಿರಲಿಲ್ಲ. ಆದರೆ ಬೀಳಲು ಧೈರ್ಯ ಬೇಕಷ್ಟೆ, ಇದ್ಯಾವುದೂ ಅವನಿಗೆ ಬೇಕಾಗಿರಲಿಲ್ಲ. ಅಷ್ಟರಲ್ಲಿಯೇ ವಾದ್ಯದವರು ಮ್ಯೂಜಿಕ್ ಬಾರಿಸುತ್ತಿದ್ದಂತೆ ಪರದೆ ಸರಿಸಿ ಸುಂದರ ಹುಡುಗಿ ಯೊಬ್ಬಳು ಪ್ರವೇಶಿಸಿದಳು. ಅದೇ ಹುಡುಗಿ. ಅವನಿಗೆ ಸಮಾಧಾನವಾಯಿತು. ಆ ಹುಡುಗಿ ಬರುತ್ತಿದ್ದಂತೆಯೇ ನಿಧಾನವಾಗಿ ಕೈಯಿಂದ ಅವಳಿಗೆ ವಿಷ್ ಮಾಡಿದ, ತಾನು ತಂದ ಗುಲಾಬಿ ಹೂವನ್ನು ತೋರಿಸಿ ಇದು ನಿನಗೆ ಎಂದ. ಆಕೆ ಕಣ್ಸನ್ನೆ ಮಾಡಿ ಸರ್ಕಸ್ ಅಖಾಡದ ಸುತ್ತಲೂ ಮಾಡಿದ ವೃತ್ತಾಕಾರದ ಕಟ್ಟೆಯ ಮೇಲೆ ಇರಿಸಲು ಸೂಚಿಸಿದಳು. ಅವನು ಹೂಂ ಎಂದು ತಲೆಯಲ್ಲಾಡಿಸಿ ಅಲ್ಲಿಯೇ ಗುಲಾಬಿ ಹೂವನ್ನು ಇರಿಸಿದ. ಆನಂದದಿಂದ ಕಲ್ಪನಾ ಗೋಪುರ ಕಟ್ಟತೊಡಗಿದ.

ಆಕೆಯೊಬ್ಬಳೇ ಜೋಕಾಲಿ ಜೀಕತೊಡಗಿದಳು. ಆಕೆಯೊಂದಿಗೆ ಒಬ್ಬ ಬಫೂನ್ ಸಹಾಯಕ ನಾಗಿದ್ದನು. ಅವನಿಗೆ ವಯಸ್ಸಾಗಿತ್ತು. ಬಹುಷಃ ಆಕೆಯ ತಂದೆಯಾಗಿರಬಹುದು. ಬಹಳ ಜಾಗ್ರತೆಯಿಂದ ಆಕೆಯನ್ನು ವೀಕ್ಷಿಸುತ್ತಿದ್ದ. ಆಕೆಗೆ ಏನೇನೋ ಹೇಳುತ್ತಿದ್ದ. ಹುಷಾರು ಮಗಳೇ ಎಂದು ಕಾಣುತ್ತದೆ. ಭಾಷೆ ತಿಳಿಯುತ್ತಿರಲಿಲ್ಲ. ಕೈ ಸನ್ನೆಯಿಂದ, ಕಣ್ಸನ್ನೆಯಿಂದ ಅರ್ಥವಾ ಗುತ್ತಿತ್ತು. ಆಕೆ ಜೋಕಾಲಿ ಜೀಕುವುದರಲ್ಲಿ ಪರಿಣಿತಳಾಗಿದ್ದಳು. ಎಲ್ಲರೂ ತದೇಕ ಚಿತ್ತದಿಂದ ಜೋಕಾಲಿ ಜೀಕುವುದನ್ನೇ ನೋಡುತ್ತಿದ್ದರು. ಇದಾದ ಬಳಿಕ ಏಣಿ ಮೇಲೆ ಕಸರತ್ತು ಮಾಡು ವುದು-ಏಣಿಯನ್ನು ಮೇಲೆ ಕಟ್ಟಿ ತೂಗಿಬಿಟ್ಟಿದ್ದರು. ಅದರ ಮೇಲೆ ಒಂದು ತುದಿಯಲ್ಲಿ ನಿಂತು ಬ್ಯಾಲೆನ್ಸ್ ಮಾಡಿ ಕಪ್ಪು ಬಸಿಗಳನ್ನು ಕಾಲಿನಿಂದ ತಲೆಯ ಮೇಲೆ ಕೂರಿಸಿಕೊಂಡಳು. ನಂತರ ಏಣಿಯ ಒಂದು ತುದಿಯಲ್ಲಿರುವ ತಿರುಗುಣಿಯನ್ನು ಬಾಯಲ್ಲಿ ಕಚ್ಚಿಕೊಂಡು ಯೋಗಾಸನ ಹಾಕುತ್ತಿದ್ದಳು. ಸ್ವಲ್ಪ ಆಯ ತಪ್ಪಿದರೆ ಹಲ್ಲು ಮುರಿದು ಕೆಳಗೆ ಬೀಳುವುದೇ. ಒಂದು ವೇಳೆ ಏಣಿಯ ಬ್ಯಾಲೆನ್ಸ್ ತಪ್ಪಿದರೆ ಅದು ಕೆಳಗೆ ಬಂದು ತಕ್ಷಣ ತಲೆಗೆ ಬಡಿಯುವ ಹಾಗೆ ಇತ್ತು. ಈ ರೀತಿ ಅದನ್ನು ಕಟ್ಟಲಾಗಿತ್ತು. ಅವಳು ತಿರುಗುಣಿಯನ್ನು ಬಾಯಲ್ಲಿ ಕಚ್ಚಿಕೊಂಡು ತಿರುಗಿದಳು. ಹಾಗೆಯೇ ನಾನಾ ಬಗೆಯ ಯೋಗಾಸನಗಳನ್ನು ಹಾಕಿದಳು. ಅದನ್ನು ನೋಡುತ್ತಿದ್ದವರೆಲ್ಲ ಉಸಿರು ಬಿಗಿ ಹಿಡಿದು ಕುಳಿತಿದ್ದರು. ಅವನಿಗೆ ಮಾತ್ರ ಸಮಾಧಾನವಾಗುತ್ತಿರಲಿಲ್ಲ. ಸರಳವಾಗಿ ಕಸರತ್ತು ಮಾಡಬೇಕೆಂಬ ಅಭಿಲಾಷೆಯಿತ್ತು. ಮಾಲೀಕ ಬಿಡಬೇಕಲ್ಲ, ಅದನ್ನು ಜನರಿಗೆ ತೋರಿಸಿ ಹಣ ಮಾಡುತ್ತಿದ್ದ. ಏನು ಮಾಡುವುದು ಎಂದು ಯೋಚಿಸಿ ಆ ಸರ್ಕಸ್ಸಿನ ಹುಡುಗಿ ಯನ್ನು ಹೇಗಾದರೂ ಮಾಡಿ ಮದುವೆಯಾಗಬೇಕೆಂದುಕೊಂಡ. ಸುಂದರ ಮೈಮಾಟದ ಹುಡುಗಿಯನ್ನು ಅಲ್ಲಿಂದ ಯಾವಾಗ ಕರೆದುಕೊಂಡು ಹೋಗಲಿ, ಈ ಬಂಧನದಿಂದ ಹೇಗೆ ಬಿಡಿಸಿಕೊಳ್ಳಲಿ ಎಂದು ಬಾರಿ ಬಾರಿ ಯೋಚಿಸಿದ. ಆಗಲೇ ಅವನು ಆಕೆಯ ಪರವಶನಾಗಿ ಬಿಟ್ಟಿದ್ದ.

ಆಕೆಯ ಕಸರತ್ತು ಮುಗಿಯುತ್ತಿದ್ದಂತೆ ಎಲ್ಲರೂ ನಿಟ್ಟುಸಿರುಬಿಟ್ಟರು. ಸಂತೋಷದಿಂದ ಚಪ್ಪಾಳೆ ತಟ್ಟಿದರು. ಕೆಲವರು ಶೀಳೆ ಹೊಡೆದರು. ಕೇಕೇ ಹಾಕಿದರು. ಇವನು ಆಕೆಯನ್ನು ನೋಡುತ್ತಾ ಮತ್ತೆ ಕಲ್ಪನಾ ಲೋಕದಲ್ಲಿ ಮುಳುಗಿದ್ದ. ಆಕೆ ಮುಂದೆ ಬಂದು ಮೊದಲು ನಿಂತಿದ್ದ ಸ್ಥಳಕ್ಕೆ ಬಂದು ಎಂದಿನಂತೆ ಸಭಿಕರಿಗೆ ವಂದಿಸಿ ಹಿಂದಿರುಗುವಾಗ ಆಕೆಯ ತಲೆಯಲ್ಲಿ ಗುಲಾಬಿ ಹೂ ಮಿಂಚುತಿತ್ತು. ಅಲ್ಲಿಟ್ಟಿದ್ದ ಗುಲಾಬಿ ಹೂ ಅಲ್ಲಿರಲಿಲ್ಲ. ನನ್ನ ಪ್ರೀತಿ ಫಲಿಸಿತು ಎಂದುಕೊಂಡ. ಎರಡು ಮೂರು ಕಸರತ್ತಿನೊಂದಿಗೆ ಅಂದಿನ ಸರ್ಕಸ್ಸು ಮುಗಿಯಿತು.

ಇವನು ಮಾತ್ರ ಈ ಸರ್ಕಸ್ಸು ಕಂಪನಿ ಇರುವ ತನಕ ಎಲ್ಲಾ ಶೋಗಳನ್ನು ನೋಡಲು ಹೋಗತೊಡಗಿದ. ಅದೇ ತನ್ನ ಖಾಯಂ ಜಾಗದಲ್ಲಿಯೇ ಕುಳಿತುಕೊಳ್ಳುತ್ತಿದ್ದ. ಆಕೆ ಸೂಚಿಸಿದ ಸ್ಥಳ ದಲ್ಲಿಯೇ ಗುಲಾಬಿ ಹೂವನ್ನು ಇಡುತ್ತಿದ್ದ.

ಅದು ಆಕೆಯ ಮುಡಿಯೇರುತ್ತಿತ್ತು. ಸಾಗರದ ಮಾರಿಕಾಂಬೆಯ ಜಾತ್ರೆಯು ಮುಗಿಯಿತು. ಸರ್ಕಸ್ ಕಂಪನಿಯವರು ತಮ್ಮ ಟೆಂಟ್ ಕಿತ್ತರು. ಮುಂದಿನ ಠಿಕಾಣಿ, ಸಿರ್ಸಿ ಎಂದು ಹೇಗೋ ತಿಳಿದುಕೊಂಡ. ಅಲ್ಲಿಗೆ ಬಾ ಎಂದು ಆಕೆ ಅವನಿಗೆ ಕಣ್ಸನ್ನೆ ಮಾಡಿ ಹೇಳಿದ್ದಳು. ಅವನಿಗೆ ಸ್ವರ್ಗಕ್ಕೆ ಮೂರೇ ಗೇಣು ಉಳಿದಿತ್ತು. ಮನೆಯಲ್ಲಿದ್ದ ಅಲ್ಪಸ್ವಲ್ಪ ಹಣವನ್ನು ತೆಗೆದುಕೊಂಡು ಅಲ್ಲಿಗೂ ಹೋದ. ಅಲ್ಲಿಯೂ ಎಲ್ಲಾ ಶೋಗಳನ್ನು ನೋಡತೊಡಗಿದ. ಗುಲಾಬಿ ಹೂವನ್ನು ಅದೇ ಕಟ್ಟೆಯ ಮೇಲೆ ಇಡಲು ಮರೆಯಲಿಲ್ಲ. ಅದೂ ಕೂಡ ಆಕೆಯ ಮುಡಿಯೇರುತ್ತಿತ್ತು. ಅಲ್ಲಿಯೇ ಕುಳಿತ ಅವನನ್ನು ಕಂಡು ಆಕೆಯೂ ಹರ್ಷಗೊಂಡಳು. ಆಕೆಯೂ ಕೂಡ ಆತನನ್ನು ಮನಸಾರೆ ಪ್ರೀತಿಸತೊಡಗಿದಳು.

ಒಂದು ದಿನ ಟೆಂಟಿನ ಹಿಂಭಾಗಕ್ಕೆ ಬಾ ಎಂದು ಅವನಿಗೆ ಕಣ್ಸನ್ನೆ ಮಾಡಿದಳು. ಅವಳು ಸೂಚಿಸಿದ್ದೇ ತಡ ಟೆಂಟಿನ ಹಿಂಭಾಗದಲ್ಲಿ ಪ್ರತ್ಯಕ್ಷನಾಗಿದ್ದ. ಆಕೆಯನ್ನು ಹುಡುಕುವುದು ಕಷ್ಟವಾಗಲಿಲ್ಲ, ಆಕೆ ಸರ್ಕಸ್ ಉಡುಪಿನಲ್ಲಿಯೇ ಬಂದಿದ್ದಳು. ಅವನು ಆಕೆಯನ್ನು ಬಿಗಿದಪ್ಪಿ ಆ ಸರ್ಕಸೆಲ್ಲಾ ಬೇಡ, ನನ್ನೊಂದಿಗೆ ಬಂದು ಬಿಡು. ಜೀವನ ಎಂಬ ಅಖಾಡದಲ್ಲಿ ನಾವಿಬ್ಬರೂ ಸರ್ಕಸ್ಸು ಮಾಡೋಣ ಎಂದು ಪಿಸುಗುಟ್ಟಿದ. ಆದರೆ ವಯಸ್ಸಾದ ನಮ್ಮಪ್ಪ ಇದ್ದಾರೆ ಎಂದಾಗ ಇರಲಿ ಅವರನ್ನು ನಮ್ಮೊಂದಿಗೆ ಕರೆದುಕೊಂಡು ಹೋಗೋಣ ಎನ್ನುತ್ತಿದ್ದಂತೆ ಸರ್ಕಸ್ಸಿನ ಮ್ಯೂಜಿಕ್ ಆರಂಭವಾಯಿತು. ಒಲ್ಲದ ಮನಸ್ಸಿನಿಂದ ತಕ್ಷಣ ಅವನ ಬಿಗಿ ಹಿಡಿತದಿಂದ ತಪ್ಪಿಸಿ ಕೊಂಡು ಒಳನಡೆದಳು. ಅವನ ಮನಸ್ಸು ಮಾತ್ರ ಮರುಳು ಗಾಡಿನಂತಾಗಿತ್ತು. ತನ್ನ ಸ್ಥಳಕ್ಕೆ ಹೋಗಿ ಕುಳಿತುಕೊಂಡ. ಸ್ವಲ್ಪ ಸಮ ಯದ ನಂತರ ಆಕೆ ಸರ್ಕಸ್ಸಿನ ಅಖಾಡ ಪ್ರವೇಶಿಸಿದಳು. ಅವನನ್ನು ಕಂಡು ಹಸನ್ಮುಖದಿಂದ ಕಸರತ್ತು ಮಾಡತೊಡಗಿದಳು. ಆದರೆ ಅವನಿಗೆ ಈ ಸರ್ಕಸ್ಸು, ಕಾಮನ ಬಿಲ್ಲಿನಂತೆ ಆಕೆ ಬಾಗುವುದು ಇಷ್ಟವಿರಲಿಲ್ಲ. ಸಾಕು ಒಳನಡೆ ಎಂದು ಕಣ್ಸನ್ನೆ ಮಾಡುತ್ತಿದ್ದ. ಹೊಟ್ಟೆಪಾಡಿಗೆ ಈ ಸರ್ಕಸ್ಸನ್ನು ಮಾಡಲೇಬೇಕೆಂದು ಆಕೆ ತನ್ನ ಹೊಟ್ಟೆಯನ್ನು ತೋರಿಸುತ್ತಿದ್ದಳು. ಹತ್ತಾರು ದಿನಗಳು ಕಳೆದವು.

ಇಲ್ಲಿ ಇರುವ ಒಬ್ಬ ಮಗ ಎಲ್ಲಿ ಹೋದ ಎಂದು ಅವನ ತಾಯಿ ಪರಿತಪಿಸುತ್ತಿದ್ದಳು. ಮಗ ನಿಲ್ಲದೇ ಅವನ ತಾಯಿಗೆ ಹುಚ್ಚು ಹಿಡಿದಂತಾಗಿತ್ತು. ನಿನ್ನ ಮಗ ಸರ್ಕಸ್ ಹುಡುಗಿಯೊಂದಿಗೆ ಓಡಿಹೋಗಿದ್ದಾನೆಂದು ಹೇಳಿದರು. ನಿಜಕ್ಕೂ ಅವನ ತಾಯಿ ಅರೆ ಹುಚ್ಚಿಯಂತಾಗಿದ್ದಳು. ಅವನನ್ನು ಹುಡುಕಿ ಕರೆ ತರಲು ಸ್ನೇಹಿತರನ್ನು ಕಳುಹಿಸಿದ್ದಳು. ಅವರು ಎಷ್ಟು ಹುಡುಕಿದರೂ ಅವನು ಸಿಗಲಿಲ್ಲ. ಸಿರ್ಸಿಯಲ್ಲಿ ಸರ್ಕಸ್ಸು ಇರಲಿಲ್ಲ. ಬೇರೆ ಯಾವ ಊರಿಗೆ ಹೋದರೆಂದು ತಿಳಿಯಲಿಲ್ಲ. ಅವರು ವಾಪಾಸು ಬಂದರು. ಅವನ ತಾಯಿಗೆ ನಿಮ್ಮ ಮಗ ಅಲ್ಲಿ ಸಿಗಲಿಲ್ಲ, ಅಲ್ಲಿ ಸರ್ಕಸ್ಸು ಏನೂ ಇಲ್ಲ ಎಂದು ಕೈಚೆಲ್ಲಿದರು. ತಾಯಿ ಮಾತ್ರ ಮಗನ ನೆನಪಿನಲ್ಲೇ ಹಾಸಿಗೆ ಹಿಡಿದಳು.

ಸರ್ಕಸ್ಸಿನ ಹುಡುಗಿಗೆ ಹದಿನೆಂಟು ಮೀರಿದ ವಯಸ್ಸು, ಆಕರ್ಷಕ ಮೈಕಟ್ಟು, ವಿದ್ಯುದೀಪದ ಬೆಳಕಿನಲ್ಲಿ ಬಹಳ ಸುಂದರಳಾಗಿ ಕಾಣುತ್ತಿದ್ದಳು. ಆಕೆಯ ತಂದೆ ತಾಯಿ ನೇಪಾಳದಿಂದ ವಲಸೆ ಬಂದವರು. ಅಲ್ಪಸ್ವಲ್ಪ ಕನ್ನಡ ಮಾತನಾಡುತ್ತಿದ್ದರು. ಅವರೂ ಕೂಡ ಸರ್ಕಸ್ಸಿ ನಲ್ಲಿ ಕೆಲಸ ಮಾಡುತ್ತಿದ್ದರು. ಈಕೆ ಚಿಕ್ಕ ಮಗುವಿದ್ದಾಗಲೇ ತಾಯಿ ತೀರಿಕೊಂಡಿದ್ದಳು. ಚಿಕ್ಕಂದಿನಿಂದಲೇ ಆಕೆಯ ತಂದೆ ಆರೈಕೆ ಮಾಡಿ ಮುದ್ದಾಗಿ ಬೆಳೆಸಿದ್ದ. ಈಕೆಯೂ ಕೂಡ ಮಗುವಿದ್ದಾಗಲೇ ಸರ್ಕಸ್ಸಿನಲ್ಲಿ ಕಸರತ್ತು ಮಾಡಲು ಅಭ್ಯಾಸ ಮಾಡಿದ್ದಳು. ಸೊಗಸಾಗಿ ಬೆಳೆದಿದ್ದಳು. ಈಕೆಯ ಸುಂದರವಾದ ಮೈಮಾಟ ಕಂಡು ಸರ್ಕಸ್ಸಿ ನ ಮಾಲೀಕ ಈಕೆಯನ್ನು ಸರ್ಕಸ್ಸಿ ನ ಪ್ರಮುಖ ಳನ್ನಾಗಿ ಮಾಡಿಕೊಂಡಿದ್ದ. ಈಕೆ ಮಾಡುವ ಕಸರತ್ತಿಗಿಂತಲೂ ಈಕೆಯನ್ನು ನೋಡಲೆಂದೇ ಸರ್ಕಸ್ಸಿ ಗೆ ಜನರು ತಂಡ ತಂಡವಾಗಿ ಬರತೊಡಗಿದ್ದರು. ಸರ್ಕಸ್ಸಿ ನ ಮಾಲಿಕನಿಗೆ ಹಣವೂ ಸೇರಿತು. ಸರ್ಕಸ್ಸು ಕೂಡಾ ಅಭಿವೃದ್ಧಿಯಾಯಿತು.

ಹೀಗಿರುವಾಗ, ಸಾಗರದಲ್ಲಿ ಮಾರಿಕಾಂಬಾ ಜಾತ್ರೆ ಆರಂಭವಾಗಿತ್ತು. ಈ ಜಾತ್ರೆಗೆ ಗಣಪತಿ ಕೆರೆಯ ಒಂದು ಪಕ್ಕದಲ್ಲಿದ್ದ ಜಾಗದಲ್ಲಿ ಸರ್ಕಸ್ಸಿನ ಟೆಂಟನ್ನು ಹಾಕಿದ್ದರು. ಬಹಳ ವರ್ಷಗಳ ನಂತರ ಸಾಗರಕ್ಕೆ ಸರ್ಕಸ್ಸು ಬಂದಿದ್ದರಿಂದ ಜನ ಕಿಕ್ಕಿರಿಯುತ್ತಿದ್ದರು. ಪ್ರತಿ ಶೋಗಳು ಯಾವಾಗಲೂ ತುಂಬಿರುತ್ತಿದ್ದವು.

ಸರ್ಕಸನ್ನು ನೋಡಿದ ಮೇಲೆ ಆ ಹುಡುಗಿಯನ್ನು ಪ್ರಶಂಸಿಸುತ್ತಿದ್ದರು. ಇನ್ನೂ ಕೆಲವರು ಟೀಕೆ ಮಾಡುತ್ತಿದ್ದರು. ಮಹಿಳಾ ಮಂಡಳಿಗಳು ಕೆಂಡಾಮಂಡಲವಾಗಿದ್ದವು. ಕಾರಣವಿಷ್ಟೇ, ಮೈಮೇಲೆ ಸಾಕಷ್ಟು ಬಟ್ಟೆ ಇಲ್ಲದೇ ಕಸರತ್ತು ಮಾಡುತ್ತಿರುವುದು ಒಂದು ರೀತಿಯಲ್ಲಿ ಬೆತ್ತಲೇ ಮೈ ಪ್ರದರ್ಶನವಾಗಿತ್ತು. ಅವರ ಮೈ ಪ್ರದರ್ಶನದಿಂದ ಮಾಲೀಕ ಹಣ ಸುಲಿಯುತ್ತಿದ್ದನೆಂದು ಮಾರನೆ ದಿನ ಪತ್ರಿಕೆಯಲ್ಲಿ ಸುದ್ದಿ ಬಂದವು. ಯಾವುದೇ ವಿಚಲತೆ ಹೊಂದದೇ ಸರ್ಕಸ್ಸು ನಿಲ್ಲದೇ ಮುಂದುವರೆದಿತ್ತು. ಜನ ಮಾತ್ರ ಕಡಿಮೆಯಾಗಿರಲಿಲ್ಲ, ಒಂದು ತಿಂಗಳ ನಂತರ ಜಾತ್ರೆ ಮುಗಿಯಿತು. ಸಿರ್ಸಿಗೆ ಹೋದರು. ಅಲ್ಲಿ ಅವರ ಮುಂದಿನ ಠಿಕಾಣಿಯಾಗಿತ್ತು.

ಸಿರ್ಸಿಯಲ್ಲಿ ದಿನಕ್ಕೆ ನಾಲ್ಕು ಶೋಗಳನ್ನು ಏರ್ಪಡಿಸಿದ್ದರು. ಅಲ್ಲಿಯೂ ಸಹ ಎಲ್ಲಾ ಶೋಗಳು ಭರ್ತಿಯಾಗಿರುತ್ತಿದ್ದವು. ಸುಮಾರು ಹತ್ತು ಹದಿನೈದು ದಿನಗಳು ಕಳೆದಿವೆ. ಆ ಹುಡುಗಿ ಉಳಿದು ಕೊಂಡಿದ್ದ ರೂಮಿನ ಹತ್ತಿರ ಇವನು ಹೋಗುತ್ತಿದ್ದ. ಇವರೀರ್ವರು ದಿನವೂ ಪರಸ್ಪರ ಭೇಟಿ ಆಗುತ್ತಲೇ ಇದ್ದರು.

''ನೀನು ಈ ಸರ್ಕಸ್ಸಿನ ಜಂಜಾಟ ಬಿಟ್ಟುಬಿಡು''

''ನನ್ನ ಜೀವನಕ್ಕೆ, ಇದು ಜೀವಾಳ, ಹೇಗೆ ಬಿಡಲಿ?''

''ವಯಸ್ಸಾದ ಮೇಲೆ ಇದೇ ಸರ್ಕಸ್ ಮಾಡುತ್ತೀಯಾ?''

''ಇಲ್ಲ''

''ಈಗಲೇ ಬಿಟ್ಟು ಬಿಡು''

''ಹೇಗೆಬಿಡಲಿ?''

''ಅದಕ್ಕೆ ನಿನ್ನನ್ನು ನಾನು ಪ್ರೀತಿಸುತ್ತೇನೆ. ನೀನು ಕೂಡ ನನ್ನನ್ನು ಪ್ರೀತಿಸುತ್ತೀಯಾ ತಾನೇ?''

''ಇಲ್ಲ ಎಂದವರಾರು? ಈ ಜೀವ ಬೇಕಾದರೆ ಬಿಟ್ಟೇನು? ನಿಮ್ಮನ್ನು ಮಾತ್ರ ಬಿಟ್ಟಿರಲು ಸಾಧ್ಯವೇ ಇಲ್ಲ'' ಎಂದಳು ಮೆಲುದನಿಯಲ್ಲಿ.

''ಹಾಗಾದರೇನಾವೇಕೆಮದುವೆಯಾಗಬಾರದು?''

ಮದುವೆ ಎಂಬ ಪದವು ಕಿವಿಯ ಮೇಲೆ ಬಿದ್ದೊಡನೆ ಆಕೆಯ ಕಣ್ಣುಗಳಲ್ಲಿ ಮಿಂಚು ಹೊಮ್ಮಿತು. ಕಣ್ಣುಗಳಿಂದ ಆನಂದ ಬಾಷ್ಪಗಳು ಉದುರಿದವು. ಆತನನ್ನು ಬಿಗಿದಪ್ಪಿ ಅವನ ಮುಖದ ಮೇಲೆಲ್ಲಾ ಮುತ್ತಿನ ಸುರಿ ಮಳೆಗೈದು ''ಅದಷ್ಟು ಬೇಗ ಈ ಭಾಗ್ಯ ನನ್ನದಾಗಲಿ, ಮದುವೆಯಾದರೆ ಯಾವಾಗಲೂ ಹೀಗೆ ಇರಬಹುದಲ್ಲವೇ'' ಎಂದು ಅವನ ಕಿವಿಯಲ್ಲಿ ಪಿಸುಗುಟ್ಟಿ ತನ್ನ ಹಿಡಿತವನ್ನು ಬಿಗಿಗೊಳಿಸಿದಳು. ಅವನಿಗೆ ಹಿತವೆನಿಸಿತು.

ನೀನೇನು ಯೋಚಿಸಬೇಡ. ನಮ್ಮ ಅಪ್ಪಂಗೆ ನಾನೊಬ್ಬನೇ ಮಗ. ಎರಡು ಮನೆಗಳಿವೆ. ಒಂದರಲ್ಲಿ ನಾವಿದ್ದೇವೆ. ಇನ್ನೊಂದನ್ನು ಬಾಡಿಗೆಗೆ ಕೊಟ್ಟಿದ್ದೇವೆ. ಇನ್ನೂ ಅಲ್ಪಸ್ವಲ್ಪ ಗದ್ದೆ ಇದೆ. ಸಾಯೋತನಕ ಕೃಷಿ ಮಾಡಿಕೊಂಡು ಹಾಯಾಗಿರಬಹುದು'' ಎಂದ.

''ನಮ್ಮ ಮದುವೆಗೆ ನಿಮ್ಮ ತಂದೆ ತಾಯಿಯರ ವಿರೋಧ ಉಂಟಾದರೆ?''

''ಇಲ್ಲ ಹಾಗೇನು ಆಗಲಾರದು. ನನ್ನ ಮಾತೆ ಕೊನೆ ನಿರ್ಧಾರ.''

''ನೀವೇನೇ ಹೇಳಿ ನನಗಂತೂ ಭಯ''

''ನೀನೇನು ಭಯ ಪಡುವ ಅಗತ್ಯವೇ ಇಲ್ಲ. ಇಬ್ಬರ ನಿರ್ಧಾರಗಳು ಒಂದೇ ಆಗಿರುವಾಗ ಇನ್ನು ತಡವೇಕೆ. ಇಲ್ಲಿಯೇ ಇದ್ದ ಸಬ್ ರಿಜಿಸ್ಟಾರ್ ಕಛೇರಿಯಲ್ಲಿ ನಮ್ಮ ಹೆಸರನ್ನು ನೋಂದಾಯಿಸಿ ಕೊಳ್ಳೋಣ. ಮಾರಿಗುಡಿಯಲ್ಲಿ ತಾಳಿ ಕಟ್ಟುವ ಸಮಾರಂಭ ಇಟ್ಟುಕೊಳ್ಳೋಣ'' ಎಂದು ಅವಳಿಗೆ ಹೇಳಿದ.

ತನ್ನ ಕೊರಳಿಗೆ ತಾಳಿ ಕಟ್ಟುವೆನೆಂದ ಕೂಡಲೇ ಮೋಹಕ ನಗೆಯಿಂದ ಅವಳು ಅವನ ಕೊರಳಿಗೆ ತನ್ನೆರಡು ತೋಳುಗಳಿಂದ ಬರಸೆಳೆದು ಮತ್ತೊಮ್ಮೆ ಬಿಗಿದಪ್ಪಿ ಅವನ ತುಟಿಗೊಂದು ತನ್ನ ಕೆಂಪಾದ ತುಟಿಗಳಿಂದ ಮುತ್ತಿನ ಮುದ್ರೆಯೊತ್ತಿದಳು. ''ನೀವು ಹೇಳಿದ ಹಾಗೆ ಆಗಲಿ'' ಎಂದು ತನ್ನ ಹೀರು ಕಣ್ಣುಗಳಿಂದ ಸಮ್ಮತಿಸಿದಳು.

ಅಂದು ಅವಳ ಆನಂದಕ್ಕೆ ಮಿತಿಯೇ ಇರಲಿಲ್ಲ. ಬಹಳ ಸಂತಸದಿಂದ ಪರದೆ ಸರಿಸಿ ಅಖಾಡಕ್ಕೆ ಪ್ರವೇಶಿಸುತ್ತಿದ್ದಂತೆ ಸರ್ಕಸನ್ನು ನೋಡಲು ಬಂದಿದ್ದ ಜನರು ಅವಳನ್ನು ಕಂಡಾಕ್ಷಣ ಶಿಳ್ಳೆ, ಕೇಕೆ ಹಾಕುತ್ತಲೇ ಅವಳನ್ನು ಸ್ವಾಗತಿಸಿದರು. ಆಕೆಯ ಸರ್ಕಸ್ಸಿನ ಉಡುಪಿನಲ್ಲಿ ಮನಮೋಹಕವಾಗಿ ಕಾಣುತ್ತಿದ್ದಳು. ಆಕೆಯ ಕೈ ತೋಳುಗಳು ಮತ್ತು ತೊಡೆ ಕಾಲುಗಳು ಮಿರ ಮಿರನೇ ಹೊಳೆಯು ತ್ತಿದ್ದವು. ಅವಳು ಮುಗುಳುನಕ್ಕರಂತೂ ಮುಗಿದೇ ಹೋಯಿತು. ಅವರೆಲ್ಲ ಶಿಳ್ಳೆ ಹಾಕುವುದನ್ನು, ಕೇಕೆ ಹಾಕುವುದನ್ನು ನಿಲ್ಲಿಸದಿದ್ದನ್ನು ಕಂಡು ಇವನು ಕಸಿವಿಸಿಗೊಂಡು ಎದ್ದು ಹೋಗಿ ಆಕೆಯನ್ನು ಒಳಗೆ ಎಳೆದುಕೊಂಡು ಹೋಗಲೇ ಎಂದೆನಿಸಿತ್ತು. ಅಂದು ಅವಳ ಅಂದ ಇಮ್ಮಡಿಯಾಗಿತ್ತು. ನಗುಮುಖದಿಂದ, ಲವಲವಿಕೆಯಿಂದ ಇದ್ದಳು. ಸರ್ಕಸ್ಸಿಗೆ ವಿದಾಯ ಹೇಳುವ ದಿನಗಳು ಹತ್ತಿರ ಬಂದಿದ್ದವು. ಆಗಲೇ ಸತಿಪತಿಗಳಾಗಿದ್ದೇವೆಂಬ ಭ್ರಮಾ ಲೋಕದಲ್ಲಿ ಅವಳು ಮುಳುಗಿ ದ್ದಳು. ಅವಳ ಮಂದಹಾಸ ಯಾವ ರತಿಗೇನು ಕಡಿಮೆ ಇರಲಿಲ್ಲ, ಜೋಕಾಲಿ ಜೀಕಿದಳು. ಜೀಕಿನ ಸಂಭ್ರಮದಲ್ಲಿ ಆಕೆಯ ಕುಡಿನೋಟ ಇವನ ಮೇಲೆ ಬಿತ್ತು. ಇವನು ಕೂಡ ಆಕೆಯನ್ನು ಪ್ರೀತಿಯ ಕಣ್ಣುಗಳಿಂದ ಹೀರುವಂತೆ ನೋಡುತ್ತಿದ್ದ. ಆಕೆಗೆ ಇವನ ದೃಷ್ಟಿಯಿಂದ ಖುಷಿಯೋ ಖುಷಿ. ಅಂದು ಜೀಕಿನಾಟ ಸೊಗಸಾಗಿತ್ತು. ಏಣಿಯ ಮೇಲೆ ಆಕೆಯ ಸರ್ಕಸ್ಸು ಅದ್ಭುತವಾ ಗಿತ್ತು. ಆಕೆಯ ಸರ್ಕಸ್ಸಿನ ಪರಿಯಿಂದ ಇಡೀ ಸರ್ಕಸ್ಸ ಸ್ತಬ್ದವಾಗಿತ್ತು. ಉಸಿರು ಬಿಗಿ ಹಿಡಿದಿತ್ತು.

ಇದ್ದಕ್ಕಿದ್ದಂತೆ ಇವನು ಗಲಿಬಿಲಿಗೊಂಡ. ಏನೋ ಒಂದು ರೀತಿ ಅವನ ಮನಸ್ಸಿನಲ್ಲಿ ತಲ್ಲಣ ಶುರುವಾಯಿತು. ಏಕೋ ಏನೋ ಆ ತಿರುಗುಣಿಯನ್ನು ಬಾಯಲ್ಲಿ ಕಚ್ಚಿಕೊಂಡು ತಿರುಗುವುದೇ ಬೇಡವಾಗಿತ್ತು. ದೇವರ ಮೇಲೆ ಬಾರ ಹಾಕಿ ಕುಳಿತುಕೊಂಡು ದೇವರೇ ಆಕೆಗೆ ಏನೂ ಆಗದಿರಲಿ ಎಂದು ಹರಕೆ ಕಟ್ಟಿಕೊಂಡ. ಸರಿ, ಆಕೆ ಏಣಿಯ ತುದಿಯಲ್ಲಿದ್ದ ತಿರುಗುಣಿಯನ್ನು ಹಲ್ಲಿನಲ್ಲಿ ಕಚ್ಚಿಕೊಂಡು ಯೋಗಾಸನ ಮಾಡಿದಳು. ಎಲ್ಲವೂ ಮುಗಿಯಿತು. ಕೊನೆಯ ಸುತ್ತು, ತಿರುಗುಣಿ ಯನ್ನು ಹಲ್ಲಿನಿಂದ ಬಿಗಿಯಾಗಿ ಕಚ್ಚಿಕೊಂಡು ತಿರುಗಲು ಆರಂಭಿಸಿದಳು. ಅದು ತಿರುಗಲಿಲ್ಲ, ಪ್ರಯತ್ನಿಸಿದಳು. ಆದರೂ ತಿರುಗುಣಿ ತಿರುಗಲೇ ಇಲ್ಲ, ಎಲ್ಲರೂ ಹೋ ಎಂದು ಕೂಗಿದರು. ಏನೋ ಆಯಿತೆಂದು ಆಕೆ ಹೌಹಾರಿದಳು, ಆಯತಪ್ಪಿದಳು. ಕೆಳಗೆ ಬಿದ್ದುಬಿಟ್ಟಳು. ಕೆಳಗಡೆ ಕಟ್ಟಿದ್ದ ಬಲೆಯಲ್ಲಿ ಬಿದ್ದಾಗ ಏನೂ ಆಗಿಲ್ಲವೆಂದುಕೊಂಡರು. ಐದು ನಿಮಿಷ ಕಳೆಯಿತು, ಹತ್ತು ನಿಮಿಷ ಕಳೆಯಿತು. ಆದರೂ ಆಕೆ ಏಳಲಿಲ್ಲ, ಇವನಿಗಂತೂ ಗಾಬರಿಯಾಯಿತು. ತಾಳದೇ ಆಕೆ ಬಿದ್ದ ಸ್ಥಳಕ್ಕೆ ಓಡಿ ಬಂದ. ಅಲ್ಲಿ ಅವನನ್ನು ತಡೆದರು. ಆಕೆಯ ತಂದೆ, ಎಲ್ಲಾ ಓಡಿ ಬಂದರು. ಆಕೆಯನ್ನು ಹೊತ್ತುಕೊಂಡು ಒಳ ನಡೆದರು. ಸರ್ಕಸ್ಸು ಮಾತ್ರ ನಿಲ್ಲದೇ ಮುಂದುವರೆದಿತ್ತು. ಅವನು ಆಕೆಯ ಹಿಂದೆಯೇ ಓಡಿದ, ಅಷ್ಟರಲ್ಲಿಯೇ ಆಕೆಯನ್ನು ಆಸ್ಪತ್ರೆಗೆ ಕಾರಿನಲ್ಲಿ ಒಯ್ದಿದ್ದರು. ಅವರು ಬರುವಷ್ಟರಲ್ಲಿಯೇ ವಿಧಿಯು ಆಕೆಯನ್ನು ಅವನಿಂದ ಕಸಿದುಕೊಂಡಿತ್ತು. ಅವನ ತಲೆ ತಿರುಗಿತು. ಎಚ್ಚರ ತಪ್ಪಿದ ಅಲ್ಲಿಯೇ ಕುಸಿತ. ಅವನು ಎಚ್ಚರವಾದಾಗ ಆಕೆಯ ದೇಹವನ್ನು ಬೊಂಬಾಯಿಗೆ ಒಯ್ದರೆಂದು ತಿಳಿಯಿತು. ಅವರನ್ನು ಹಿಂಬಾಲಿಸಿ ಅಲ್ಲಿಗೂ ಹೋದ.

ಆಗ ಅಲ್ಲಿ ಆಕೆಯ ಸಮಾಧಿಯ ಬಳಿ ಕುಳಿತು ರೋಧಿಸತೊಡಗಿದ. ಇವನೊಬ್ಬ ಹುಚ್ಚನೆಂದು ಅಲ್ಲಿದ್ದವರೆಲ್ಲ ಅವನನ್ನು ದೂಡಿದರು. ಆಕೆಯ ಪ್ರೇಮಿಯೆಂದು ಅವನ ರೋಧನದಿಂದ ತಿಳಿಯುತ್ತಿತ್ತು. ಹುಚ್ಚನಂತಾಗಿ ಸ್ಮಶಾನದಲ್ಲಿಯೇ ಇರುತ್ತಿದ್ದ. ಒಂದು ದಿನ ಪರಿಚಿತರೊಬ್ಬರು ಕಂಡ ಇವನನ್ನು ಊರಿಗೆ ಕರೆದುಕೊಂಡು ಬಂದಿದ್ದರು. ಮಗ ಮರಳಿ ಮನೆಗೆ ಬಂದನೆಂದು ಅವನ ತಂದೆ-ತಾಯಿ ಸಂಭ್ರಮದಲ್ಲಿದ್ದರು.

ಹರಿದ ಅಂಗಿ, ಕೆದರಿದ ತಲೆ, ಬಾಡಿದ ಮುಖ, ಕುರುಚಲು ಗಡ್ಡ, ಬಡವಾದ ದೇಹ ಕಂಡು ಆತನ ತಾಯಿಯ ಜೀವ ಚುರು ಚುರು ಎಂದಿತು. ಬಂದ ಮಗನನ್ನು ಆಲಿಂಗಿಸಿಕೊಂಡಳು. ಮುದ್ದಾಡಿದಳು. ''ಎಷ್ಟೊಂದು ಬಡವಾಗಿದ್ದೀಯಲ್ಲೋ ಮಗನೇ'' ಎಂದು ದುಃಖಿಸಿದಳು. ಅಕ್ಕಪಕ್ಕದವರೆಲ್ಲಾ ಈ ಸನ್ನಿವೇಶವನ್ನು ಕಂಡು ತಾಯಿ ಮಗನ ಪ್ರೀತಿಯ ಮಮಕಾರ ಎಷ್ಟು ಎಂದು ಊಹಿಸಿದರು. ಬಣ್ಣಿಸಿದರು. ಮಮ್ಮಲ ಮರುಗಿದರು. ಎಷ್ಟಾದರೂ ಹೆತ್ತ ಕರುಳಲ್ಲವೇ ಎಂದುಕೊಂಡರು.

ಎಷ್ಟೇ ದೊಡ್ಡವರಾದರೂ ತಾಯಿಗೆ ಮಗನೇ ಅಲ್ಲವೇ. ಅವನಿಗೆ ಸ್ನಾನ ಮಾಡಿಸಿದಳು, ಮೈ ಒರೆಸಿದಳು. ಹಾಕಿಕೊಳ್ಳಲು ಬಟ್ಟೆ ಕೊಟ್ಟಳು. ದೇವರ ಕೋಣೆಗೆ ಕರೆದೊಯ್ದು ದೀಪ ಹಚ್ಚಿಸಿ ದಳು. ''ಹೊಟ್ಟೆ ತುಂಬಾ ಉಣ್ಣು ಮಗನೆ, ಎಷ್ಟು ದಿವಸಗಳಾದವು ಉಣ್ಣದೇ'' ಎಂದು ಮಾಡಿದ ಎಲ್ಲಾ ಅಡುಗೆಯನ್ನು ತಟ್ಟೆಯಲ್ಲಿ ಬಡಿಸಿದಳು. ಅವನಿಗೆ ಇದ್ಯಾವುದರ ಪರಿವೇ ಇರಲಿಲ್ಲ, ಅವನ ತಲೆಯಲ್ಲಿ ಸರ್ಕಸ್ಸಿನ ಹುಡುಗಿಯೇ ತುಂಬಿಕೊಂಡಿದ್ದಳು. ಊಟ ಮಾಡಿದ ಶಾಸ್ತ್ರ ಮುಗಿಸಿ ತನ್ನ ಕೊಠಡಿಗೆ ಹೋಗಿ ಮಲಗಿದ. ಆಕೆಯದ್ದೇ ನೆನಪು. ಆಕೆ ಜೀಕುವ ಪರಿ, ಆಕೆಯ ಮೋಹಕ ನಗು, ಆಕೆಯ ಸುಂದರ ಮುಖ ಕಂಡು ಆತನ ಕರುಳು ಕಿವಿಚಿದಂತಾಯಿತು. ಆಕೆಯ ಮೆಲು ಮಾತುಗಳು ಅವನ ಕಿವಿಯಲ್ಲಿ ಗುಂಯ್ ಗುಡುತ್ತಿದ್ದವು. ಆದರೇನು ಮಾಡು ವುದು. ಅವನಿಂದ ಆಕೆಯನ್ನು ವಿಧಿ ಕಸಿದು ಕೊಂಡಿತ್ತು. ನಾನೊಬ್ಬನೇ, ನಾನೊಬ್ಬನೇ, ನಾನು ಒಂಟಿ, ನಾನಿನ್ನು ಒಂಟಿ ಎಂದು ಎಲ್ಲಾ ನೆನಪುಗಳು ಒಮ್ಮೆಗೆ ಅವನ ಮನಸ್ಸಿಗೆ ನುಗ್ಗಿ ಅವನನ್ನು ಕ್ಷಣ ಕ್ಷಣಕ್ಕೂ ಹತಾಶನನ್ನಾಗಿ ಮಾಡುತ್ತಿದ್ದವು. ನಾನು ಇನ್ಯಾರಿಗಾಗಿ ಬದುಕಬೇಕು? ನನಗೆ ಬದುಕೇ ಬೇಡ ಎಂದು ಅತ್ತು ಅತ್ತು ಅವನ ಕಣ್ಣುಗಳು ಕೆಂಡವಾಗಿದ್ದವು.

ಬೆಳಗಿನ ಜಾವ ಅವನ ತಾಯಿ ಬೇಗ ಎದ್ದು ಸಂಭ್ರಮದಿಂದ ಮನೆಯಂಗಳ ಗುಡಿಸಿ, ಸಾರಿಸಿ ರಂಗೋಲಿ ಹಾಕಿದಳು. ಅದನ್ನು ಕಂಡು ಮಗ ಮರಳಿ ಬಂದನೆಂದು ಬಹಳ ಸಂತೋಷದಿಂದಿದ್ದಾರೆ ಎಂದು ಅಕ್ಕಪಕ್ಕದವರೆಲ್ಲಾ ಮಾತನಾಡಿಕೊಳ್ಳುತ್ತಿದ್ದರು.

ಬೆಳಿಗ್ಗೆ ಎಷ್ಟು ಹೊತ್ತಾದರೂ ಮಗ ಏಳಲಿಲ್ಲ, ನಿದ್ದೆಗೆಟ್ಟಿರಬಹುದು, ಅದಕ್ಕೆ ಇನ್ನೂ ಮಲಗಿ ದ್ದಾನೆಂದು ತಿಳಿದಿದ್ದರು. ಸ್ವಲ್ಪ ಹೊತ್ತಿನ ಮೇಲೆ ಅವನ ತಂದೆ ಹೋಗಿ ಅವನ ಕೊಠಡಿಯ ಬಾಗಿಲನ್ನು ದೂಡಿದರೂ ತೆರೆಯಲು ಬರಲಿಲ್ಲ, ಆತ ಬಾಗಿಲನ್ನು ಭದ್ರವಾಗಿ ಹಾಕಿಕೊಂಡಿದ್ದ. ಎಷ್ಟೇ ಕೂಗಿದರೂ ಮಗ ಎದ್ದು ಬಾಗಿಲು ತೆಗೆಯಲಿಲ್ಲ, ಅಕ್ಕ ಪಕ್ಕದವರೆಲ್ಲಾ ನೆರೆದರು. ಅವನ ತಾಯಿಗೆ ದಿಗಿಲಾಯಿತು. ಬಾಗಿಲು ಒಡೆದರು.

ಆದರೇನು ಮಾಡುವುದು ಮಗ ನೇಣಿಗೆ ಶರಣಾಗಿದ್ದ. ಎಲ್ಲರೂ ಸೇರಿ ನೇಣಿನ ಕುಣಿಕೆ ಬಿಡಿಸಿ ದೇಹವನ್ನು ಕೆಳಗಿಳಿಸಿ ಮಲಗಿಸಿದರು. ಕೈಕಾಲು ತಿಕ್ಕಿ ಬಿಸಿ ಮಾಡಿದರು. ಆದರೆ ಅವನ ಪ್ರಾಣ ಹಾರಿ ಹೋಗಿತ್ತು. ತನ್ನ ಮಗನ ಅನಿರೀಕ್ಷಿತ ಸಾವಿನಿಂದ ತಾಯಿ ಅರೆಹುಚ್ಚಿಯಾದಳು. ಆತನ ಮೇಲೆ ಬಿದ್ದು ಬಿದ್ದು ಹೊರಳಾಡಿ ಚೀರುವುದು, ಕೂಗುವುದು, ಹೆಚ್ಚಾಯಿತು. ಆಕೆಯನ್ನು ಹಿಡಿಯುವುದೇ ಕಷ್ಟಕರವಾಯಿತು. ನನ್ನ ಮಗನ್ನ ಸರ್ಕಸ್ ಹುಡುಗಿ ಹಾಳು ಮಾಡಿಬಿಟ್ಟು, ಕೊಂದು ಹಾಕಿದ್ದು ಎಂದು ಕಿರುಚಾಡುವುದು ಹೆಚ್ಚಾಯಿತು. ಅವರ ಬಂಧುಗಳೆಲ್ಲ ಬಂದ ಮೇಲೆ ಶವದ ಸ್ನಾನ, ಪೂಜೆ, ಅಲಂಕಾರ ಎಲ್ಲಾ ಧಾರ್ಮಿಕ ವಿಧಿ ವಿಧಾನಗಳೆಲ್ಲಾ ಮುಗಿದ ಬಳಿಕ ಶವವನ್ನು ತೆಗೆದುಕೊಂಡು ಹೋಗಿ ಅವರ ಗದ್ದೆಯಲ್ಲಿಯೇ ಸಮಾಧಿ ಮಾಡಲಾಯಿತು.

ತಾಯಿಯ ಬುದ್ಧಿ ಭ್ರಮಣೆಯಾಯಿತು. ಮಗನ ಸಮಾಧಿಯ ಮೇಲೆ ಬಿದ್ದು ಬಿದ್ದು ಹೊರಳಾಡುವುದು, ಎದೆ ಬಡಿದುಕೊಂಡು ಅಳುವುದು, ಚೀರಾಡುವುದು ಮಾತ್ರ ನಿಲ್ಲಲೇ ಇಲ್ಲ. ಅದನ್ನು ಕಂಡ ಜನ ಮುದುಕಿಯ ಬಗ್ಗೆ ಮರುಗಿದರು. ಚೀರುತ್ತಾ, ಕೂಗುತ್ತಾ ಊರೆಲ್ಲಾ ಸುತ್ತಾಡೋದು, ಓಡುವುದು, ನಂತರ ಮಗನ ಸಮಾಧಿ ಬಳಿ ಬಂದು ರೋಧಿಸುವುದು ಯಥಾಸ್ಥಿತಿ ನಡೆದೇ ಇತ್ತು. ಇಷ್ಟೆ ನೋಡಿ ಸ್ವಾಮಿ, ನಮ್ಮನೆ ಹತ್ತಿರವೇ ಈಕೆಯ ಮನೆ. ಗಂಡ ಇದ್ದಾನೆ. ಅವನು ಹಣ್ಣು ಮುದುಕ, ಕಣ್ಣು ಕಾಣಿಸುವುದಿಲ್ಲ. ಯಾರೋ ದೂರದ ಸಂಬಂಧಿಯೊಬ್ಬರು ಅವರನ್ನು ನೋಡಿಕೊಳ್ಳುತ್ತಾ ಇದ್ದಾರೆ. ಏನು ಮಾಡುವುದು? ಎಷ್ಟೇ ಪ್ರಯತ್ನಿಸಿದರು ಈಕೆ ಸರಿಯಾಗಲಿಲ್ಲ, ಎಂದು ಬೆಳಗಿನ ವಾಕಿಂಗಿಗೆ ಬಂದು ತನ್ನ ಜೊತೆಗೂಡಿದ ಸ್ನೇಹಿತ ಈಕೆಯಾರೆಂದು ಕೇಳಿದಾಗ ಆಕೆಯ ಕಥಾ ವೃತ್ತಾಂತವನ್ನು ವಿವರಿಸಿದಾಗ ಸ್ನೇಹಿತರೆಲ್ಲಾ ನಿಟ್ಟುಸಿರು ಬಿಟ್ಟರು.

# ಉತ್ತಮ ಕ್ರಮ



ರಾಜ್ಯ ಸರ್ಕಾರದ ಬಹುತೇಕ ಎಲ್ಲ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಸಾಗಿದ್ದು, ಅದರಿಂದ ಆಡಳಿತಯಂತ್ರದ ಮೇಲೆ ಪ್ರತಿಕೂಲ ಪರಿಣಾಮವಾಗುತ್ತಿದೆ. ಸಿಬ್ಬಂದಿ ಇಲ್ಲದೆ ಜನಸಾಮಾನ್ಯರ ಕೆಲಸ ಗಳು ಸಮಯಕ್ಕೆ ಸರಿಯಾಗಿ ಆಗುತ್ತಿಲ್ಲ. ಇರುವ ಸಿಬ್ಬಂದಿ ಮೇಲೆ ಕಾರ್ಯಭಾರ ಹೆಚ್ಚುತ್ತಿದೆ. ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲೂ ಅದರಿಂದ ಹಿನ್ನಡೆ ಆಗುತ್ತಿದೆ. ಮತ್ತೊಂದೆಡೆ, ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದ ಯುವಕ-ಯುವತಿಯರು ಸರ್ಕಾರಿ ಉದ್ಯೋಗ ಪಡೆಯಲು ಸ್ಪರ್ಧಾತ್ಮಕ ಪರೀಕ್ಷೆ ಸೇರಿ ಎಲ್ಲಾ ಬಗೆಯ ಸಿದ್ಧತೆ ಮಾಡಿಕೊಂಡಿದ್ದರೂ, ನೇಮಕಾತಿಗಳೇ ರಾಜ್ಯದಲ್ಲಿ ನಡೆಯದೆ ದಿಕ್ಕು ಕಾಣದಂತಾಗಿದ್ದಾರೆ. ಈ ಕುರಿತ ಪ್ರಕ್ರಿಯೆಗಳ ಬಗ್ಗೆಯೇ ಭ್ರಮನಿರಸನಗೊಂಡಿದ್ದಾರೆ. 2.80 ಲಕ್ಷಕ್ಕೂ ಅಧಿಕ ಖಾಲಿ ಹುದ್ದೆ ಗಳಿದ್ದು, ಹಲವು ವರ್ಷಗಳಿಂದ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ. ಇದು ಉದ್ಯೋಗಾಕಾಂಕ್ಷಿಗಳ ನಿದ್ದೆಗೆಡಿಸಿದೆ. ಪ್ರತಿ ವರ್ಷವೂ ಒಂದಿಲ್ಲ. ಒಂದು ಕಾರಣ ನೀಡಿ, ನೇಮಕಾತಿ ಪ್ರಕ್ರಿಯೆನ್ನು ಮುಂದೂಡುತ್ತಾ ಬರಲಾಗುತ್ತಿದೆ. ಫೆ.25ರಂದು ವಿದ್ಯಾನಗರಿ ಧಾರವಾಡದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಉದ್ಯೋಗಾಕಾಂಕ್ಷಿಗಳು ಸರ್ಕಾರದ ಎದುರು ಬೇಡಿಕೆಯ ಹಕ್ಕೊತ್ತಾಯ ಮಂಡಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ನೇಮಕಾತಿ ಅಧಿಸೂಚನೆಗಳು ಸಮಯಕ್ಕೆ ಸರಿಯಾಗಿ ಹೊರಡಿಸದಿರುವುದರಿಂದ ಅನೇಕ ಅಭ್ಯರ್ಥಿಗಳು ನಿಗದಿತ ವಯೋಮಿತಿಯನ್ನು ದಾಟುತ್ತಿದ್ದಾರೆ. ಅದರಿಂದ ಅವರ ವರ್ಷಗಳ ಪರಿಶ್ರಮ ವ್ಯರ್ಥವಾಗುವ ಭೀತಿ ಎದುರಾಗಿದೆ. ಅದನ್ನು ಮನಗಂಡು, ಸರ್ಕಾರವು ಇತ್ತೀಚೆಗೆ ಉದ್ಯೋಗಾಕಾಂಕ್ಷಿಗಳಿಗೆ ಐದು ವರ್ಷಗಳ ವಯೋಮಿತಿ ಸಡಿಲಿಕೆ ಘೋಷಿಸಿದೆ ಮತ್ತು ಬಾಕಿ ಇರುವ ನೇಮಕಾತಿಗಳನ್ನು ಆದಷ್ಟು ಬೇಗ ಪೂರ್ಣಗೊಳಿಸುವುದಾಗಿ ಭರವಸೆ ನೀಡಿದೆ.

ಇನ್ನು, ನೇಮಕಾತಿ ಪ್ರಕ್ರಿಯೆ ಸುಗಮವಾಗಿ ನಡೆಸಬೇಕಾದ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ತನ್ನ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ ಕಾಣುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ. ಕೆಪಿಎಸ್‌ಸಿಯನ್ನು ಮುಚ್ಚುವುದೇ ಲೇಸು ಎಂದು ಇತ್ತೀಚೆಗೆ ಮಾಹಿತಿ-ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ವಿಧಾನಸಭೆ ಕಲಾಪದ ಸಂದರ್ಭದಲ್ಲಿ ಹೇಳಿದ್ದು, ಪರಿಸ್ಥಿತಿಯ ಗಂಭೀರತೆಗೆ ಸಾಕ್ಷಿಯಾಗಿದೆ. ಹಾಗಾಗಿ, ಸರ್ಕಾರವೇ ಮುಂದಡಿ ಇಟ್ಟು, ಕಡ್ಡಾಯವಾಗಿ ವಾರ್ಷಿಕ ನೇಮಕಾತಿ ನಡೆಸುವ ಮೂಲಕ ಖಾಲಿ ಹುದ್ದೆ ಭರ್ತಿ ಮಾಡಲು ಮುಂದಾಗಿರುವುದು ಸಕಾಲಿಕ ಕ್ರಮವಾಗಿದೆ. ಬುಧವಾರ ವಿಧಾನಸಭೆಯಲ್ಲಿ ಕೆಪಿಎಸ್‌ಸಿ ಕುರಿತ ಚರ್ಚೆಗೆ ಉತ್ತರಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಮುಂದಿನ ದಿನಗಳಲ್ಲಿ ಕಡ್ಡಾಯವಾಗಿ ವಾರ್ಷಿಕ ನೇಮಕಾತಿ ನಡೆಯಬೇಕು. ಆಯಾ ಇಲಾಖೆಗಳು ಮುಂದಿನ ಕ್ಯಾಲೆಂಡರ್ ವರ್ಷದಲ್ಲಿ ಎಷ್ಟು ಹುದ್ದೆ ಭರ್ತಿ ಮಾಡಬೇಕು ಎಂಬುದನ್ನು ಕೆಪಿಎಸ್‌ಸಿಗೆ ತಿಳಿಸಬೇಕು. ಇದರಿಂದ ಪ್ರತಿ ವರ್ಷ ಕೆಪಿಎಸ್‌ಸಿ ಯಾವ ತಿಂಗಳು, ಯಾವ ವಾರ ಮತ್ತು ಯಾವ ದಿನದಂದು ಪರೀಕ್ಷೆಯನ್ನು ಕಡ್ಡಾಯವಾಗಿ ನಡೆಸಬೇಕು ಎಂಬುದರ ಕುರಿತು ಸ್ಪಷ್ಟತೆ ಇರಲಿದೆ. ಮುಖ್ಯವಾಗಿ, ಯುಪಿಎಸ್‌ಸಿ ಮಾದರಿಯ ಈ ನೇಮಕಾತಿ ಕ್ಯಾಲೆಂಡರ್ ಅಭ್ಯರ್ಥಿಗಳ ಒತ್ತಡ ಮತ್ತು ಕಾನೂನು ವಿವಾದ ಗಳನ್ನು ತಗ್ಗಿಸುತ್ತದೆ ಎಂದಿದ್ದಾರೆ ಮುಂದಿನ ಐದು ವರ್ಷಗಳ ಅವಧಿಗೆ ನೇಮಕಾತಿ ಯೋಜನೆ ಸಿದ್ಧಪಡಿಸಲು ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ.

# ಕೊನೆಗೂ

ನಿಸರ್ಗದೂರಿನ ಹಳ್ಳಿಯ ಮಣ್ಣಿನ ವಾಸನೆಯಲ್ಲೇ ಬೆಳೆದ ಇಬ್ಬರು ಮಕ್ಕಳು, ತಮ್ಮ ತಂದೆ-ತಾಯಿಯ ಕೈಹಿಡಿದು ನಡೆದ ದಾರಿಯನ್ನು ಮರೆಯಲಾರಂಭಿಸಿ ದರು. ನಗರದ ಬೆಳಕು ಅವರಿಗೆ ಹೊಸ ಕನಸುಗಳನ್ನು ಕೊಟ್ಟಿತು. ಆದರೆ ಹಳ್ಳಿಯ ಕತ್ತಲಲ್ಲಿ ಉಳಿದ ತಂದೆ-ತಾಯಿಯ ಕಣ್ಣೀರು ಮಾತನಾಡುತ್ತಿತ್ತು ಪೇಟೆಯ ಗದ್ದಲದಲ್ಲಿ ಮಕ್ಕಳಿಗೆ ಕೇಳಲಿಲ್ಲ.ತಂದೆಯ ಒದ್ದೆಯಾದ ಕೈಗಳು, ತಾಯಿಯ ಮೌನ ಪ್ರಾರ್ಥನೆಗಳು-ಇವೆಲ್ಲವೂ ಅವರ ನೆನಪಿನಲ್ಲಿ ನಿಧಾನವಾಗಿ ಅಳಿದುಹೋದವು. ಲಕ್ಷ ಲಕ್ಷ ಹಣ ಗಳಿಸಿದರೂ, ಹೃದಯದ ಬಡತನವನ್ನು ಅವರು ಅರಿಯಲಿಲ್ಲ. ಹಳೆಯ ಮನೆ ಬಾಗಿಲಲ್ಲಿ ಪ್ರತಿದಿನ ಕಾದಿದ್ದ ತಂದೆ, ಇವತ್ತು ಬರ್ತೀರಾ? ಎಂದು ಕೇಳುತ್ತಿದ್ದ.

ತಾಯಿ ಮೌನವಾಗಿ ಹಚ್ಚಿದ ದೀಪ ಕಣ್ಣೀರಿನಿಂದಲೇ ಬೆಳಗುತ್ತಿತ್ತು, ಒಂದು ದಿನ, ನಗರ ಜೀವನದ ಗದ್ದಲದಲ್ಲಿ ಮಕ್ಕಳು ಏಕಾಂತವನ್ನು ಕಂಡರು. ಅಲ್ಲಿ ಹಣ ಇದ್ದರೂ, ಮಮತೆ ಇರಲಿಲ್ಲ; ಸೌಕರ್ಯ ಇದ್ದರೂ, ಸಂತೋಷ ಇರಲಿಲ್ಲ. ಹಳ್ಳಿಯ ಮಣ್ಣಿನ ಮೌಲ್ಯ, ತಂದೆ ತಾಯಿಯ ಪ್ರೀತಿಯ ಅರ್ಥವಾಯಿತು. ಆದರೆ ಹಿಂದಿರುಗುವಾಗ, ಬಾಗಿಲು ತೆರೆದಿದ್ದರೂ, ಮನಗಳು ಮುಚ್ಚಿಕೊಂಡಿ ದ್ದವು. ಗೋಡೆಯ ಭಾವಚಿತ್ರಕ್ಕೆ ಹಾಕಿದ ಹೂವಿನ ಮಾಲೆ ಬರಿಯ ದಾರವನ್ನ ಹೊತ್ತು ಒಣಗಿ ನಿಂತಿತ್ತು.

**- ಧೀರಜ್ ಬೆಳ್ಳಾರೆ**

# ಅದು ಆಯಿಲ್ ಫಿಲ್ಟರ್ ಕಥೆ ಇದು ವಾಟರ್ ಫಿಲ್ಟರ್ ಕಥೆ






ವಿಶ್ವ ಜಲ ದಿನವು ಪ್ರತಿ ವರ್ಷ ಮಾರ್ಚ್ 22ರಂದು ಶುದ್ಧ ನೀರಿನ ಮೌಲ್ಯದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಿಹಿ ನೀರಿನ ಸಂಪನ್ಮೂಲಗಳ ಬುದ್ಧಿವಂತ ಬಳಕೆಗಾಗಿ ಕರೆ ನೀಡುವ ಜಾಗತಿಕ ವಿಶ್ವಸಂಸ್ಥೆಯ ಆಚರಣೆಯ ದಿನವಾಗಿದೆ. ಇದು ಸಿಹಿ ನೀರಿನ ಮಹತ್ವವನ್ನು ಎತ್ತಿ ತೋರಿಸುತ್ತದೆ. ಸಿಹಿ ನೀರಿನ ಮಹತ್ವವನ್ನು ಸುಸ್ಥಿರ ನಿರ್ವಹಣೆಗಾಗಿ ಪ್ರತಿಪಾದಿಸಲು ಈ ದಿನವನ್ನು ಬಳಸಲಾಗುತ್ತದೆ. ನನಗೆ ಬಾಲ್ಯದ ಕುಡಿಯುವ ನೀರಿನ ಹೋರಾಟದ ದಿನಗಳು ನೆನಪಾದವು.

ಸಾಲಿಗ್ರಾಮ ತಾಲ್ಲೂಕಿಗೆ ಸೇರಿದ ಶೀಗವಾಳ್ ನಮ್ಮ ಅಜ್ಜಿಯ ಊರು. ಅರಕಲಗೂಡು ತಾಲ್ಲೂಕಿನ ಗಡಿ ಗ್ರಾಮ ಕೇರಳಾಪುರದಿಂದ ಇಲ್ಲಿಗೆ ನಾಲ್ಕೈದು ಕಿ.ಮೀ. ದೂರ. ನಾನು ಬಾಲ್ಯದ ಬೇಸಿಗೆ ರಜೆ ದಿನಗಳನ್ನು ಕಳೆದಿದ್ದು ಈ ಹಳ್ಳಿಯಲ್ಲಿಯೇ. ಹಿಂದೆಲ್ಲಾ ಗೊರೂರಿನಿಂದ ರಾಮನಾಥಪುರ ಮಾರ್ಗ ಕೇರಳಾಪುರಕ್ಕೆ ಹೋಗಿ ಶಿಗವಾಳ್‌ಗೆ ನಡೆದೇ ಹೋಗುತ್ತಿದ್ದವು. ಈಗ ಆಟೋಗಳಿವೆ ನೂರು ರೂ. ಚಾರ್ಜ್ ಆಗಲಿ ಆಟೋದಲ್ಲೇ ಹೋಗಬೇಕು. ಬೆಳಿಗ್ಗೆ ವಾಕ್ ಮಾಡುತ್ತೇವೆಯೆಲ್ಲ ಹಾಗೇ ನಡೆದೇ ಹೋಗೋಣವೇ ಎಂದರೆ ಮಡದಿ ಕೇಳುವುದಿಲ್ಲ. ನನ್ನಾಕೆಯ ತವರೂರು ಕೂಡ ಇದೇ ಶೀಗವಾಳ್. ಅವಳ ಸೋದರಮಾವನ ಮನೆಯಲ್ಲಿ ಹೆಣ್ಣು ಮಗಳ ಹಸೆಗೆ ಕೂರಿಸುವ ಸಮಾರಂಭಕ್ಕೆ ಕರೆಬಂತು ಹೋದೆವು.

ನನಗೆ ಅಜ್ಜಿಯ ಮನೆ ಈಗ ಹೇಗಿದೆ? ನೋಡುವ ಕುತೂಹಲ! ಅದು ಬಾವಿಕಟ್ಟೆ ಪುಟ್ಟಮ್ಮನ ಮನೆ. ನಮ್ಮ ಅಜ್ಜಿಯೇ ಪುಟ್ಟಮ್ಮ.. ಅಜ್ಜಿಯ ಮನೆ ಮುಂದೆ ಒಂದು ಸೇದೋ ಬಾವಿ ಇತ್ತು. ಊರಿಗೆಲ್ಲಾ ಅದೊಂದೇ ಸೇದೋ ಬಾವಿ. ಅಲ್ಲಿಗೆ ಊರಿನ ಮಹಿಳೆಯರು ಬಂದು ನೀರು ಸೇದು ಕೊಳ್ಳುತ್ತಿದ್ದರು. ಮನೆ ಮುಂದೆ ಬಾವಿ ಇದ್ದಿದ್ದರಿಂದ ಅಜ್ಜಿಗೆ ಬಾವಿಕಟ್ಟೆ ಪುಟ್ಟಮ್ಮ ಅಡ್ಡ ಹೆಸರು ಲ್ಯಾಂಡ್ ಮಾರ್ಕ್.

ನಾನು ಹೈಸ್ಕೂಲಿಗೆ ಬರುವಷ್ಟರಲ್ಲಿ ಅಜ್ಜಿ ತೀರಿಕೊಂಡು ಸೋದರಮಾವ ಸುಬ್ಬಣ್ಣ ಊರು ಬಿಟ್ಟು ಕೊರಟಿಕೆರೆ ಕಾವಲು ಬಾರೆಯಲ್ಲಿ ಒಕ್ಕಲು ಹಾಕಿದ್ದರು. ಅಂದಿನಿಂದ ನಮಗೆ ಶೀಗವಾಳ್ ಕರೆ ಎಂದರೆ ಸಾವು ಇಲ್ಲವೇ ಮದುವೆ ಅಥವಾ ಈ ರೀತಿಯ ವಿಶೇಷ ಸಮಾರಂಭಗಳಿಗೆ ಮಾತ್ರ. ಊರು ಬಿಡು ವಾಗ ಸುಬ್ಬಣ್ಣ ಮಾವ ಯಾರಿಗೋ ಆ ಮನೆಯನ್ನು ಮಾರಿ ಹೋಗಿದ್ದರು. ಈಗ ನೋಡಿದರೆ ಆ ಮನೆಯೂ ಖಾಲಿ ಬಿದ್ದು ಊರಿನ ದನದ ಕೊಟ್ಟಿಗೆಯಾಗಿತ್ತು. ಸೇದೋಬಾವಿಗೆ ಚಪ್ಪಡಿ ಕಲ್ಲುಗಳಿಂದ ಮುಚ್ಚಿದ್ದರು. ನಮ್ಮೂರು ಹೇಮಾವತಿ ನದಿಯ ದಡದಲ್ಲಿದ್ದರೂ ನಮ್ಮ ಮನೆ ನದಿಯಿಂದ ಬಹಳ ಮೇಲ್ಗಡೆ ಇತ್ತು. ನದಿಗೆ ಒಂದು ಪಂಪ್ ಹೌಸ್‌ನ್ನು ಗ್ರಾಮ ಪಂಚಾಯಿತಿಯಿಂದ ಅಳವಡಿಸಿದ್ದು ಪೈಪ್ ಮೂಲಕ ನೀರು ಬರುತ್ತಿತ್ತು. ಮನೆಯ ಮುಂದೆ ಒಂದು ಸಾರ್ವಜನಿಕ ನಲ್ಲಿ ಇತ್ತು. ಅಲ್ಲಿ ನೀರಿಗೆ ಕೂಗಾಡುವುದು ದಿನನಿತ್ಯ ನಡೆದಿತ್ತು. ಅದಕ್ಕೂ ಮೊದಲು ಮನೆಯಿಂದ ಪರ್ಲಾಂಗ್ ದೂರದಲ್ಲಿ ಒಂದು ಸೇದೋ ಬಾವಿ ಇತ್ತು. ಅಲ್ಲಿಂದ ನೀರು ಸೇದಿ ಹೊತ್ತು ತರುವುದು ನಮಗೆ ಒಂದು ದೊಡ್ಡ ಕೆಲಸವಾಗಿತ್ತು. ಮುಂದೆ ಗ್ರಾಮ ಪಂಚಾಯಿತಿಗೆ ದುಡ್ಡು ಕಟ್ಟಿ ಮನೆಗೆ ಒಂದು ನಲ್ಲಿ ಹಾಕಿಸಿಕೊಂಡೆವು. ಮನೆಯ ಮುಂದೆ ಹಾಕಿಸಿಕೊಂಡ ನಲ್ಲಿ ಎರಡು ಅಡಿ ತಳದಲ್ಲಿತ್ತು. ಅದಕ್ಕೂ ತಳದಲ್ಲಿ ಮತ್ತೂ ಬಿಂದಿಗೆ ಆಳಕ್ಕೆ ತೊಟ್ಟಿ ಮಾಡಿಸಿ ಅಲ್ಲಿ ಬಿಂದಿಗೆ ಇಟ್ಟು ನೀರು ತುಂಬಿಸಿಕೊಂಡು ಮನೆಯ ಒಳಗಿನ ಕುಡಿಯುವ ನೀರಿನ ಹಂಡೆಗೆ, ಸ್ನಾನದ ಹಂಡೆಗೆ ಮತ್ತು ತೊಟ್ಟಿಗೆ ನೀರು ತುಂಬಿಸಿಕೊಳ್ಳುತ್ತಿದ್ದವು. ಹೊಳೆಯ ನೀರು ಫಿಲ್ಟರ್ ಆಗದೆ ರಾ ವಾಟರ್ ಬರುತ್ತಿತ್ತು. ಆಗ ಅಮ್ಮ ಮನೆಯ ಒಳಗಿನ ಕುಡಿಯುವ ನೀರಿನ ಹಂಡೆಗೆ ಒಂದು ಬಿಳಿ ಬಟ್ಟೆಯನ್ನು ಕಟ್ಟಿ ನೀರು ಸೋಸುತ್ತಿದ್ದರು. ಆದರೂ ಹೊಳೆಯ ನೀರು ಸಿಹಿಯಾಗಿ ಇರುತ್ತಿತ್ತು. ನಮ್ಮ ಹೇಮಾವತಿ ಹೊಳೆ ನೀರು ಕುಡಿದು ಬೇರೆ ಹಳ್ಳಿಗಳಿಗೆ ಹೋಗಿ ಬಾವಿ ನೀರು ಕುಡಿದರೆ ಇಚ್ಚೆ ಆಗುತ್ತಿರಲಿಲ್ಲ. ಬಾವಿ ನೀರು ಗಡಸು. ಸ್ನಾನ ಮಾಡಿದರೆ ಕೂದಲು ಒರಟಾಗುತ್ತಿತ್ತು. ಸೋಪಿನ ನೊರೆ ಬರುತ್ತಿರಲಿಲ್ಲ. ಹೊಳೆಯ ನೀರಿನ ಸ್ನಾನ ನೊರೆ ನೊರೆ ಸೋಪು. ಕೂದಲು ಸೋಂಪು. ಆಗ ವಾರಕ್ಕೆ ಎರಡೇ ಸ್ನಾನ. ಒಂದು ಸೋಮವಾರ ಮನೆ ದೇವರ ವಾರ. ಇನ್ನೊಂದು ಶುಕ್ರವಾರ. ಉಳಿದಂತೆ ಹಬ್ಬ ಹರಿದಿನಗಳಲ್ಲಿ ಮಾತ್ರ ಸ್ನಾನ. ಮನೆಯ ಹಿತ್ತಿಲಿನಲ್ಲಿ ಒಂದು ಎಕ್ಸ ಟ್ರಾ ತೊಟ್ಟಿ ಕಟ್ಟಿಸಿದ್ದರು. ಅದು ಎಮರ್ಜೆನ್ಸಿ ತೊಟ್ಟಿ. ಈಗ ಯುದ್ಧದ ಸನ್ನಿವೇಶದಲ್ಲಿ ಪೆಟ್ರೋಲ್ ಸ್ಟಾಕ್ ಮಾಡಿಕೊಳ್ಳಲು ಯೋಚಿಸುವುದಿಲ್ಲವೇ ಹಾಗೆ. ಆ ತೊಟ್ಟಿಯ ಸ್ಟೋರೇಜ್ ನೀರಿನಲ್ಲಿ ನಾಲ್ಕೈದು ದಿನಗಳಲ್ಲಿ ಗೊದ್ದಗಳು ಎದ್ದು ಕಾಣುತ್ತಿದ್ದವು. ನಾವು ಊರಿನಲ್ಲಿ ಇದ್ದಷ್ಟು ದಿನವು ನೀರಿಗೆ ಜಗಳ ನಡೆಯುತಿತ್ತು. ಈ ನೀರಿನಿಂದಾಗಿಯೇ ಅಕ್ಕಪಕ್ಕದ ಹೆಂಗಸರು ನಿಷ್ಠೂರವಾಗಿದ್ದರು. ನಮ್ಮ ಮನೆಯ ಪೂರ್ವಕ್ಕೆ ಹೇಮಾವತಿ ವಸತಿ ಕಾಲೋನಿ ಇತ್ತು. ಕಾಲೋನಿ ಕಾಂಪೌಂಡ್ ಪಕ್ಕ ಸಾರ್ವಜನಿಕರಿಗೆ ಎರಡು ನಲ್ಲಿ ಹಾಕಿಸಿದ್ದರು. ನಾವು ಅಲ್ಲಿಗೂ ಬಿಡದೆ ಹೋಗಿ ನೀರು ಹಿಡಿಯುತ್ತಿದ್ದೆವು. ಅಲ್ಲಿ ನೀರಿಗೆ ಕ್ಯೂ ಇರುತ್ತಿತ್ತು. ಆದರೂ ಒಂದೆರಡು ಬಿಂದಿಗೆ ಕುಡಿಯುವ ನೀರು ಹಿಡಿದುಕೊಳ್ಳಲು ಕ್ಯೂನಲ್ಲಿ ಕಾಯುತ್ತಿದ್ದವು. ಹೆಚ್‌ಆರ್‌ಪಿಯ ಆ ನೀರಿಗೆ ಆಲಂ ಮಿಕ್ಸ್ ಮಾಡುತ್ತಿದ್ದರಿಂದ ಒಂದು ರೀತಿ ಸ್ಮೆಲ್ ಇರುತ್ತಿತ್ತು. ಇದ್ದುದ್ದರಲ್ಲಿ ಕುಡಿಯುವುದಕ್ಕೆ ಯೋಗ್ಯ ವೆಂದು ವಾಸನೆ ಸಹಿಸಿಕೊಂಡು ಕುಡಿಯುತ್ತಿದ್ದೆವು. ನಮ್ಮ ಮನೆ ಹಂಚಿನ ಮನೆ. ಮನೆಯ ಮೇಲ್ಗಡೆ ಸಿಂಟೆಕ್ಸ್ ಇಡಲು ಆಗಲಿಲ್ಲ. ಹಾಸನದ ಮನೆ ಆರ್‌ಸಿಸಿ. ಇಲ್ಲಿ 500 ಲೀ.ನ ಸಿಂಟೆಕ್ಸ್ ಇರಿಸಿದ್ದೇವೆ. ಆ ನೀರನ್ನು ಸ್ನಾನಕ್ಕೆ ಪಾತ್ರೆ ತೊಳೆಯಲು ಬಳಸುತ್ತಿದ್ದವು. ಕುಡಿಯುವ ನೀರನ್ನು ನೇರ ನಲ್ಲಿಯಿಂದ ಹಿಡಿಯುತ್ತಿದ್ದವು. ನಂತರ 30 ರೂ.ಗೆ ಕುಡಿಯುವ ನೀರಿನ ಕ್ಯಾನ್‌ಗಳು ಅಂಗಡಿಗೆ ಮಾರಾಟಕ್ಕೆ ಬಂದವು. ಅಂಗಡಿಯಿಂದ ಖರೀದಿಸಿ ತಂದ ನೀರನ್ನು ಕುಡಿಯುವುದಕ್ಕೆ ಮಾತ್ರ ಬಳಸುತ್ತಿದ್ದೇವು. ಅಡುಗೆಗೆ ನಲ್ಲಿಯಿಂದ ನೇರ ನೀರು ಹಿಡಿದು ಬಳಸುತ್ತಿದ್ದವು. ಮುಂದೆ ನಮ್ಮ ಮನೆಯ ಮೇಲ್ಗಡೆ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಯಾಗಿ ಅಲ್ಲಿಂದ 5 ರೂ. ಗೋಲ್ಡ್ ಕಾಯಿನ್ ಹಾಕಿ 20 ಲೀ. ಕ್ಯಾನ್‌ನಲ್ಲಿ ನೀರು ತುಂಬಿಸಿಕೊಂಡು ಬೈಕ್‌ನಲ್ಲಿ ಹೊತ್ತು ತರುತ್ತಿದ್ದೆನು. ಈಗ ಮಡದಿ ಮನೆಯಲ್ಲಿ ವಾಟರ್ ಫಿಲ್ಟರ್ ಬೇಕೆಂದು ಹಠ ಹಿಡಿದು ಹಾಕಿಸಿಕೊಂಡಿದ್ದಾಳೆ. ಈಗ ಈ ನೀರು ಸಿಹಿ ಎನಿಸುತ್ತದೆ. ಹೊಳೆ ನೀರು ಇಷ್ಟು ಸಿಹಿ ಎನಿಸುತ್ತಿಲ್ಲ. ಆಗ ಬಿಸ್ಲೇರಿ ವಾಟರ್ ಒಂದು ಲೀಟರ್ ಎರಡು ಲೀಟರ್‌ನಲ್ಲಿ ಅಂಗಡಿಯಲ್ಲಿ ಮಾರಾಟವಾಗುತ್ತಿತ್ತು. ಅಷ್ಟು ಬೆಲೆಗೆ ನೀರು ಖರೀದಿಸಿ ಕುಡಿಯುವ ಬದಲು ಫಾಂಟ, ಮಿರಿಂಡ ಕುಡಿಯಬಹುದಲ್ಲ ಎಂದು ಯೋಚಿಸುತ್ತಿದ್ದೆ. ಆಗ ಕುಡಿಯುವ ವಯಸ್ಸು ಕುಡಿಯಲಿಲ್ಲ. ಈಗ ಸಿಹಿ ದೂರವಿಡುವ ವಯಸ್ಸು. ಆಗ ಮದುವೆ ಮುಂಜಿ ಸಮಾರಂಭ ಗಳಲ್ಲಿ ನಾವು ಹುಡುಗರು ನೀರಿನ ಲೋಟ ಹಿಡಿದು ಚೊಂಬಿನಲ್ಲಿ ನೀರು ತುಂಬಿಸಿಕೊಂಡು ಊಟಕ್ಕೆ ಕುಳಿತವರಿಗೆ ಕೊಡುತ್ತಿದ್ದವು. ಹುಡುಗರಿಗೆ ಇದು ನಿಗದಿಯಾಗಿದ್ದ ಕೆಲಸವಾಗಿತ್ತು. ಪ್ಲಾಸ್ಟಿಕ್ ಲೋಟ ಗಳು ಬಂದವು. ಕ್ಯಾನ್ ವಾಟರ್‌ಗಳನ್ನು ಅಂಗಡಿಯಿಂದ ತಂದು ಪ್ಲಾಸ್ಟಿಕ್ ಲೋಟಗಳಿಗೆ ಹುಯ್ಯುತ್ತಿ ದ್ದವು. ಆಮೇಲೆ 10 ರೂ. ಗೆ ಸಿಗುವ 500 ಲೀ.ನ ವಾಟರ್ ಬಾಟಲ್‌ಗಳನ್ನು ಹೋಲ್ ಸೇಲ್‌ನಲ್ಲಿ ತಂದು ಕುಡಿಯಲು ಇಡುತ್ತಿದ್ದರು. ಅದನ್ನು ಅರ್ಧಂಬರ್ಧ ಕುಡಿದು ಬಿಡುತ್ತಿದ್ದರು. ಈಗ 200 ಲೀ.ನ ಮಿನಿ ಬಾಟಲ್‌ಗಳು ಬಂದಿವೆ. ಅವು ತರಹೇವಾರಿ ಮಾದರಿಯಲ್ಲಿವೆ. ಈಗ ಕೊಲ್ಲಿ ಯುದ್ಧ ನಡೆಯುತ್ತಿದೆ. ಇಲ್ಲಿ ನೀರು ಬಾವಿ ಇದ್ದಂತೆ ಆಲ್ಲಿ ತೈಲಬಾವಿ. ಈಗ ಅದಕ್ಕೂ ಬೆಂಕಿ ಬೀಳುತ್ತಿದೆ. ಇಲ್ಲಿ ಆಯಿಲ್‌ಗೆ ಅಭಾವ ಅಲ್ಲಿ ನೀರಿಗೆ.

**-ಗೊರೂರು ಅನಂತರಾಜು, ಹಾಸನ.**

# ಇಸ್ರೇಲ್ ಡಿಮೋನಾ ಪಟ್ಟಣದ ಮೇಲೆ ಇರಾನ್ ಕ್ಷಿಪಣಿ ದಾಳಿ

## ಭಾರತೀಯರೇ ವಾಸವಿರುವ ಪ್ರದೇಶ | 47 ಜನರಿಗೆ ಗಾಯ

• ಪ್ರಜೋದಯ ವರದಿ



**ಜೆರುಸಲೇಮ್:** ದಕ್ಷಿಣ ಇಸ್ರೇಲ್‌ನ ಡಿಮೋನಾ ಪಟ್ಟಣದ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದ್ದು, ಕನಿಷ್ಠ 47 ಜನರು ಗಾಯಗೊಂಡಿದ್ದಾರೆ. ಗುಮ್ಮಟಾಕಾರದ ಪರಮಾಣು ಕೇಂದ್ರದ ರಚನೆ ಮತ್ತು ಲಿಟಲ್ ಇಂಡಿಯಾ ಎಂದೇ ಈ ನಗರ ಜನಪ್ರಿಯವಾಗಿದೆ ಎಂದು ವರದಿ ತಿಳಿಸಿವೆ.

ಗಾಯಾಳುಗಳ ಪೈಕಿ 12 ವರ್ಷದ ಬಾಲಕನ ಸ್ಥಿತಿ ಗಂಭೀರವಾಗಿದೆ ಎಂದು ನಗರದ ಮ್ಯಾಗೆನ್ ಡೇವಿಡ್ ಆಡಮ್ (ಎಂಡಿಎ) ರಕ್ಷಣಾ ಸೇವೆಗಳ ಅಧಿಕಾರಿಗಳು ಮತ್ತು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ.

30 ವರ್ಷದ ಮಹಿಳೆಗೂ ಗಾಜಿನ ಚೂರುಗಳು ಚುಚ್ಚಿಕೊಂಡು ಗಾಯವಾಗಿದೆ. ಇತರ 11 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಮತ್ತೆ ಕೆಲವರು ಆಶ್ರಯ ತಾಣಗಳತ್ತ ಓಡುವಾಗ ಬಿದ್ದು ಗಾಯಗೊಂಡಿದ್ದಾರೆಂದು ಅವರು ಹೇಳಿದ್ದಾರೆ.

ಬೀರ್ಶೆಬಾದ ಸೊರೊಕಾ ಆಸ್ಪತ್ರೆಯಲ್ಲಿ ಸುಮಾರು 14 ಜನರಿಗೆ ಚಿಕಿತ್ಸೆ ನೀಡಲಾಗಿದೆ. ಕ್ಷಿಪಣಿಯು ವಸತಿ ಕಟ್ಟಡದ ಮೇಲೆ ಬಿದ್ದಿದ್ದು, ಹತ್ತಿರದ ಹಳೆಯ ಮನೆಗಳು ಕುಸಿದಿವೆ. ಕಟ್ಟಡದ ನಿವಾಸಿಗಳು ಆಶ್ರಯ ತಾಣಗಳಲ್ಲಿದ್ದರು. ಆದ್ದರಿಂದ ಹೊರಗೆ ಉಳಿದಿದ್ದ ಹುಡುಗನನ್ನು ಹೊರತುಪಡಿಸಿ ಬೇರೆ ಯವರಿಗೆ ಹೆಚ್ಚಿನ ಗಾಯಗಳಾಗಿಲ್ಲ ಎಂದು ಸ್ಥಳೀಯ ನಿವಾಸಿ ತಿಳಿಸಿದ್ದಾರೆ.

ಇರಾನ್‌ನ ಖಂಡಾಂತರ ಕ್ಷಿಪಣಿ ತಡೆಯುವಲ್ಲಿ ವಾಯುರಕ್ಷಣಾ ವ್ಯವಸ್ಥೆ ವಿಫಲವಾಗಿದ್ದು, ಆ ಬಗ್ಗೆ ತನಿಖೆ ನಡೆಸಲಾಗುತ್ತಿದೆಂದು ಇಸ್ರೇಲ್ ರಕ್ಷಣಾ ಪಡೆ(ಐಡಿಎಫ್) ತಿಳಿಸಿದೆ. ಆದರೂ ವಾಯು ರಕ್ಷಣಾ ಪಡೆಗಳು ಖಂಡಾಂತರ ಕ್ಷಿಪಣಿಯನ್ನು ಗುರುತಿಸಿದ್ದವು. ಪ್ರತಿಬಂಧಕಗಳು ಹೊಡೆದುರುಳಿಸುವಲ್ಲಿ ವಿಫಲವಾದವು ಎಂದು ಇಸ್ರೇಲಿ ಸೇನೆ ಹೇಳಿದೆ.

ಇಸ್ರೇಲ್ ಪರಮಾಣು ಕೇಂದ್ರವಿರುವ ಪಟ್ಟಣದಲ್ಲೇ ಈ ದಾಳಿ ನಡೆದಿದ್ದು, ವಿಶ್ವಸಂಸ್ಥೆಯ ಪರಮಾಣು ಕಾವಲು ಸಂಸ್ಥೆ ಐಎಇಎ ಗರಿಷ್ಠ ಮಿಲಿಟರಿ ಸಂಯಮಕ್ಕೆ ಕರೆ ನೀಡಿದೆ.

ಇಸ್ರೇಲ್‌ನ ಪರಮಾಣು ಕೇಂದ್ರವಿರುವ ಡಿಮೋನಾ ಪಟ್ಟಣದಲ್ಲಿ ಕ್ಷಿಪಣಿ ದಾಳಿ ನಡೆದಿರುವ ಬಗ್ಗೆ ಐಎಇಎಗೆ ತಿಳಿದಿದೆ. ಪರಮಾಣು ಸಂಶೋಧನಾ ಕೇಂದ್ರಕ್ಕೆ ಹಾನಿಯಾದ ಯಾವುದೇ ಸೂಚನೆ ಸಿಕ್ಕಿಲ್ಲಎಂದು ಐಎಇಎ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ.

ಟಾಂಜ್ ಪರಮಾಣು ತಾಣದ ಮೇಲೆ ಈ ಹಿಂದೆ ಇಸ್ರೇಲ್ ನಡೆಸಿದ ದಾಳಿಗೆ ಪ್ರತಿಕ್ರಿಯೆಯಾಗಿ ಡಿಮೋನಾ ಪಟ್ಟಣವನ್ನು ಗುರಿಯಾಗಿಸಿಕೊಂಡಿರುವುದಾಗಿ ಇರಾನ್ ಹೇಳಿದೆ.

ಡಿಮೋನಾ ಪಟ್ಟಣದಲ್ಲಿ ಹೆಚ್ಚಿನ ಸಂಖ್ಯೆಯ ಭಾರತ ಮೂಲದ-ಯಹೂದಿಗಳಿದ್ದಾರೆ. ಬಹುತೇಕರು ಮಹಾರಾಷ್ಟ್ರದವರು. ಭಾರತದೊಂದಿಗೆ ಉತ್ತಮ ಸಂಪರ್ಕವನ್ನು ಹೊಂದಿದ್ದಾರೆ. ಹಾಗಾಗಿಯೇ ಇದನ್ನು ಲಿಟಲ್ ಇಂಡಿಯಾ ಎಂದು ಕರೆಯಲಾಗುತ್ತದೆ. ಪಟ್ಟಣದಾದ್ಯಂತ ಭಾರತೀಯರ ಅಂಗಡಿಗಳು ಹರಡಿಕೊಂಡಿವೆ. ಅವರು ಮರಾಠಿ ಭಾಷೆಯನ್ನು ಮಾತನಾಡುತ್ತಾರೆ. ಪಟ್ಟಣದ ಜನಸಂಖ್ಯೆಯ ಶೇ.30ರಷ್ಟು (7,500ಮಂದಿ) ಭಾರತೀಯರಿದ್ದು, ಪ್ರಬಲ ಸಮುದಾಯವೆನಿಸಿದೆ.

### ಕ್ಯೂಬಾ ದೇಶಾದ್ಯಂತ ವಿದ್ಯುತ್ ಕಡಿತ

ಹವಾನಾ: ಕ್ಯೂಬಾದ ಮೇಲೆ ಅಮೇರಿಕವು ಹೇರಿರುವ ನಿರ್ಬಂಧದಿಂದ ಸೃಷ್ಟಿಯಾಗಿರುವ ಇಂಧನ ಕೊರತೆ ಮತ್ತು ಹಾಳಾಗಿರುವ ದೇಶದ ವಿದ್ಯುತ್ ಉತ್ಪಾದನಾ ಮೂಲಸೌಕರ್ಯಗಳ ಕಾರಣ ಮತ್ತೊಮ್ಮೆ ದೇಶದಾದ್ಯಂತ ವಿದ್ಯುತ್ ಕಡಿತಗೊಂಡಿದೆ.

ವಿದ್ಯುತ್ ಕಡಿತಗೊಂಡಿರುವುದು ಮಾರ್ಚ್ ತಿಂಗಳಲ್ಲೇ ಇದು ಮೂರನೇ ಬಾರಿಯಾಗಿದೆ. ಯಾವ ಕಾರಣಕ್ಕಾಗಿ ವಿದ್ಯುತ್ ಕಡಿತ ಮಾಡಲಾಗಿದೆ ಎಂಬ ಬಗ್ಗೆ ಕ್ಯೂಬಾದ ವಿದ್ಯುತ್ ಒಕ್ಕೂಟ ಮಾಹಿತಿ ಬಹಿರಂಗ ಮಾಡಿರಲಿಲ್ಲ. ಬಳಿಕ ಮಾಹಿತಿ ನೀಡಿದ ಒಕ್ಕೂಟವು ನ್ಯೂವಿಟಸ್ ಉಷ್ಣ ವಿದ್ಯುತ್ ಸ್ಥಾವರದಲ್ಲಿ ವಿದ್ಯುತ್ ಉತ್ಪಾದನೆ ಸ್ಥಗಿತಗೊಂಡಿದೆ ಎಂದು ತಿಳಿಸಿದೆ.

ವಿದ್ಯುತ್ ಪೂರೈಕೆ ಪುನಃ ಆರಂಭಿಸುವ ಬಗ್ಗೆ ನಾವು ಕಾರ್ಯಪ್ರವೃತ್ತರಾಗಿದ್ದೇವೆ ಎಂದು ಸರ್ಕಾರ ಹೇಳಿದೆ. ಹಲವು ವರ್ಷಗಳಿಂದ ಹಂತ ಹಂತವಾಗಿ ವಿದ್ಯುತ್ ಉತ್ಪಾದನಾ ಮೂಲಸೌಕರ್ಯಗಳು ಹಾಳಾಗುತ್ತಿವೆ. ಈ ಕಾರಣದಿಂದಾಗಿ ಕ್ಯೂಬಾದಲ್ಲಿ ಕಳೆದ ಎರಡು ವರ್ಷದಿಂದ ವಿದ್ಯುತ್ ಕಡಿತದ ಸಮಸ್ಯೆ ತೀವ್ರವಾಗಿದೆ. ಒಂದು ದಿನದಲ್ಲಿ ಸುಮಾರು 12 ತಾಸುಗಳವರೆಗೆ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಯನ್ನು ಸದ್ಯ ಸ್ಥಗಿತಗೊಳಿಸಲಾಗಿದೆ.



# ಡಿಎಂಕೆ ಮೈತ್ರಿಯಿಂದ ಹೊರ ಬಂದ ವೇಲ್‌ಮುರುಗನ್ ಪಕ್ಷ

• ಪ್ರಜೋದಯ ವರದಿ



**ಚೆನ್ನೈ:** ಆಡಳಿತಾರೂಢ ಡಿಎಂಕೆ ಪಕ್ಷದ ನಾಯಕರ ವರ್ತನೆಯಿಂದ ಬೇಸತ್ತು ಜಾತ್ಯತೀತ ಪ್ರಗತಿಪರ ಮೈತ್ರಿಕೂಟದಿಂದ (ಎಸ್‌ಪಿಎ) ಹೊರಬರುತ್ತಿರುವುದಾಗಿ ತಮಿಳಗ ವಳುರಿಮೈ ಪಕ್ಷದ ಸ್ಥಾಪಕ ಟಿ.ವೇಲ್‌ಮುರುಗನ್ ಭಾನುವಾರ ತಿಳಿಸಿದ್ದಾರೆ.

ಡಿಎಂಕೆ ದೊಡ್ಡಣ್ಣನಂತೆ ವರ್ತಿಸುತ್ತಿದೆ. ನಮ್ಮ ಪಕ್ಷವನ್ನು ನಿರ್ಲಕ್ಷಿಸಲಾಗುತ್ತಿದೆ. ಇಂತಹ ಧೋರಣೆಯನ್ನು ಸಹಿಸುವುದಿಲ್ಲ. ನಾವು ಮೈತ್ರಿಕೂಟದಿಂದ ಹೊರನಡೆಯುವ ನಿರ್ಧಾರ ಮಾಡಿದ್ದೇವೆಂದು ಅವರು ಹೇಳಿದ್ದಾರೆ.

ಕಡಲೂರು ಜಿಲ್ಲೆಯ ಪನ್ರುತಿ ಶಾಸಕರೂ ಆಗಿರುವ ವೇಲ್ ಮುರುಗನ್, ಸೀಟು ಹಂಚಿಕೆ ಮಾತುಕತೆ ವೇಳೆ ನಮ್ಮ ಪಕ್ಷಕ್ಕೆ ಒಂದು ಸ್ಥಾನ ನೀಡುವುದಾಗಿ ತಿಳಿಸಲಾಗಿತ್ತು. ಹೀಗಾಗಿ, ಸಾಮಾಜಿಕ ನ್ಯಾಯ ಪಾಲಿಸುವುದೂ ಸೇರಿ ಹಲವು ಬೇಡಿಕೆಗಳನ್ನು ನಾವು ಮುಂದಿಟ್ಟಿದ್ದೆವು. ಆದರೆ, ಬೇರಾವುದೇ ಪಕ್ಷಗಳ ಬಳಿ ಯಾವುದೇ ಬೇಡಿಕೆಗಳು ಇಲ್ಲದಿರುವ ಹೊತ್ತಲ್ಲಿ ನೀವು ಮಾತ್ರ ಏಕೆ ಇಂತಹ ಬೇಡಿಕೆಗಳನ್ನು ಇಡುತ್ತಿದ್ದೀರಿ ಎಂದು ನಮ್ಮನ್ನೇ ಪ್ರಶ್ನಿಸಲಾಗಿತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕನಿಷ್ಠ ಕೆಲವು ಬೇಡಿಕೆಗಳನ್ನಾದರೂ ಈಡೇರಿಸುವಂತೆ ನಾನು ಸರ್ಕಾರವನ್ನು ಪದೇ ಪದೇ ಒತ್ತಾಯಿಸಿದ್ದೇನೆ. ಆದರೆ, ಡಿಎಂಕೆ ಅವನ್ನೆಲ್ಲ ನಿರ್ಲಕ್ಷಿಸಿದೆ ಎಂದ ಅವರು, ಪಕ್ಷದ ಮುಂದಿನ ನಿರ್ಧಾರದ ಕುರಿತು ಮಾತನಾಡಿ, ಮೈತ್ರಿ ಮಾಡಿಕೊಳ್ಳುವ ಸಂಬಂಧ ಬೇರೆ ಪಕ್ಷಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ. ಆದರೆ, ಎನ್‌ಡಿಎ ಸೇರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

# ಮಂಗಳೂರು ಬಂದರು ತಲುಪಿದ ಎರಡು ಹಡಗು

• ಪ್ರಜೋದಯ ವರದಿ

**ಮಂಗಳೂರು:** ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹಾಗು ಕಚ್ಚಾ ತೈಲ ಹೊತ್ತ ಎರಡು ಹಡಗು ನವ ಮಂಗಳೂರು ಬಂದರು ಪ್ರಾಧಿಕಾರಕ್ಕೆ ಭಾನುವಾರ ಬಂದಿವೆ.

ಇನ್ನೂ ನಾಲ್ಕು ಹಡಗುಗಳು ಇಲ್ಲಿಗೆ ಬರುತ್ತಿವೆ. ಸಿಂಗಪುರ ಧ್ವಜ ಹೊಂದಿರುವ ಪೈಕ್ಸಿಸ್ ಪಯೋನಿಯರ್ ಹೆಸರಿನ ಹಡಗು ಒಟ್ಟು 47,236 ಟನ್ ಎಲ್‌ಪಿಜಿ ಹೊತ್ತು ತಂದಿದೆ. ಇದು ಅಮೇರಿಕದ ಟೆಕ್ಸಾಸ್‌ನ ನೆದರ್ಲ್ಯಾಂಡ್ ಬಂದರಿನಿಂದ ಫೆ.14ರಂದು ಪ್ರಯಾಣ ಆರಂಭಿಸಿತ್ತು. ನವ ಮಂಗಳೂರು ಬಂದರು (ಎನ್‌ಎಂಪಿ)ನಲ್ಲಿ ಈ ಹಡಗಿನಿಂದ 16,714 ಟನ್ ಎಲ್‌ಪಿಜಿಯನ್ನು ಏಜಿಸ್ ಲಾಜಿಸ್ಟಿಕ್ಸ್ ಲಿಮಿಟೆಡ್‌ಗೆ ಇಳಿಸಲಾಗುತ್ತಿದೆ. ಸೋಮವಾರ ಬೆಳಿಗ್ಗೆ ಇಲ್ಲಿಂದ ಈ ಹಡಗು ಹೊರಡಲಿದೆ ಎಂದು ಮೂಲಗಳು ತಿಳಿಸಿವೆ.

ಈ ಹಡಗಿನ ಒಟ್ಟಾರೆ ಉದ್ದ 229.9 ಮೀಟರ್ ಮತ್ತು ಅದರ ಅಗಲ 37.24 ಮೀಟರ್ ಇದೆ. ಏತನ್ಮಧ್ಯೆ, ರಷ್ಯಾದ ತೈಲ ತುಂಬಿದ ಅಕ್ವಾ ಟೈಟಾನ್ ಹಡಗು ಶನಿವಾರ ರಾತ್ರಿ ಇಲ್ಲಿಗೆ ಬಂದಿದೆ. ಭಾನುವಾರ ಮಂಗಳೂರು ರಿಫೈನರಿ ಅಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್)ಗೆ 96,099.80 ಟನ್ ಕಚ್ಚಾ ತೈಲವನ್ನು ಇಳಿಸಿದೆ.

ಜನವರಿ ಅಂತ್ಯದಲ್ಲಿ ಬಾಲ್ಟಿಕ್ ಬಂದರಿನಿಂದ ಲೋಡ್ ಮಾಡಿದ್ದ ಈ ಹಡಗು ಚೀನಾದ ರಿಜಾವೊ ಬಂದರಿಗೆ ಪ್ರಯಾಣ ಬೆಳೆಸಿ, ಅಲ್ಲಿಂದ ನವ ಮಂಗಳೂರು ಬಂದರಿಗೆ ಬಂದಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ಗೆ 26,687 ಟನ್ ಎಲ್‌ಪಿಜಿಯನ್ನು ಇಳಿಸಲಿಕ್ಕಾಗಿ ಅಪೋಲೋ ಓಷನ್ ಎಂಬ ಹಡಗು ಇದೇ 25 ರಂದು ನವ ಮಂಗಳೂರು ಬಂದರಿಗೆ ಆಗಮಿಸುವ ಸಾಧ್ಯತೆಯಿದೆ. ವಿಯೆಟ್ನಾಂ ಧ್ವಜದ ಅಡಿಯಲ್ಲಿ ಪ್ರಯಾಣಿಸುತ್ತಿರುವ ಈ ಹಡಗು ಒಟ್ಟು 46,025 ಟನ್‌ಗಳಷ್ಟು ಎಲ್‌ಪಿಜಿ ಯನ್ನು ಹೊಂದಿದೆ ಎಂದು ಮೂಲಗಳು ತಿಳಿಸಿವೆ.



# ದಾಖಲೆ ಬರೆದ ಮೋದಿ: ಮುಖ್ಯಮಂತ್ರಿ, ಪ್ರಧಾನಿಯಾಗಿ 8931 ದಿನ ಪೂರ್ಣ

• ಪ್ರಜೋದಯ ವರದಿ

**ನವದೆಹಲಿ:** ಮುಖ್ಯಮಂತ್ರಿ ಮತ್ತು ಪ್ರಧಾನಿಯಾಗಿ 8,931 ದಿನಗಳನ್ನು ಪೂರ್ಯೈಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಜೀವನದಲ್ಲಿ ದಾಖಲೆ ಬರೆದಿದ್ದಾರೆ.

ಪವನ್ ಕುಮಾರ್ ಚಾಮ್ಲಿಂಗ್ ಅವರು ಸಿಕ್ಕಿಂ ಮುಖ್ಯಮಂತ್ರಿಯಾಗಿ 8,930 ದಿನ ಪೂರ್ಯೈಸುವ ಮೂಲಕ ದೇಶದಲ್ಲಿಯೇ ದೀರ್ಘಾವಧಿಗೆ ಸರ್ಕಾರದ ಮುಖ್ಯಸ್ಥರಾಗಿದ್ದ ಖ್ಯಾತಿ ಹೊಂದಿದ್ದರು. ಇದೀಗ ಮೋದಿ ಅವರು ಚಾಮ್ಲಿಂಗ್ ದಾಖಲೆಯನ್ನು ಮುರಿದಿದ್ದಾರೆ. ಪ್ರಸ್ತುತ ಮೂರನೇ ಅವಧಿಗೆ ಪ್ರಧಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೇಂದ್ರ ಸಚಿವರಾದ ರಾಜನಾಥ ಸಿಂಗ್, ಕಿರಣ್ ರಿಜಿಜು ಸೇರಿ ಬಿಜೆಪಿಯ ಹಲವು ನಾಯಕರು ಮೋದಿ ಅವರನ್ನು ಅಭಿನಂದಿಸಿದ್ದಾರೆ.

**ಅಮಿತ್ ಶಾ ಶ್ಲಾಘನೆ**

ಪ್ರಧಾನಿ ಮೋದಿ ಅವರು ಸಾರ್ವಜನಿಕ ಜೀವನದಲ್ಲಿ ದಾಖಲೆ ಬರೆದಿದ್ದಾರೆ. ಅವರಲ್ಲಿ ಸೇವಾ ಮನೋಭಾವ, ಕಠಿಣ ಪರಿಶ್ರಮ ಮತ್ತು ಬದ್ಧತೆ ಬೇರೂರಿದೆ ಎಂದು ಗೃಹ ಸಚಿವ ಅಮಿತ್ ಶಾ ಭಾನುವಾರ ಶ್ಲಾಘಿಸಿದ್ದಾರೆ.

ಮೊದಲು ಗುಜರಾತ್‌ನ ಮುಖ್ಯಮಂತ್ರಿಯಾಗಿ ಪ್ರಸ್ತುತ ದೇಶದ ಪ್ರಧಾನಿಯಾಗಿರುವ ಮೋದಿ ಅವರ ದಶಕಗಳ ಸೇವೆಯು ಅವರದ್ದೇ ಆದ ಯುಗವನ್ನು ರೂಪಿಸಿದೆ. ಬಡವರಿಗೆ ಹಕ್ಕುಗಳನ್ನು ದೊರಕಿಸಿಕೊಟ್ಟು, ಅಭಿವೃದ್ಧಿಯಲ್ಲಿ ಹೊಸ ಮೈಲುಗಲ್ಲು ಸ್ಥಾಪಿಸಿ, ಜಾಗತಿಕ ವೇದಿಕೆಯಲ್ಲಿ ಭಾರತದ ಘನತೆಯನ್ನು ಹೆಚ್ಚಿಸುವ ಮೂಲಕ ಮೋದಿ ಯುಗವು ಭಾರತದಲ್ಲಿ ಪರಿವರ್ತನೆ ಉಂಟುಮಾಡಿದೆ ಎಂದು ಶಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

24 ವರ್ಷಗಳಿಂದ ಯಾವುದೇ ರಜೆ ತೆಗೆದುಕೊಳ್ಳದೆ ದೇಶ ಮತ್ತು ಜನರಿಗಾಗಿ ಸೇವೆ ಮಾಡುತ್ತಿರುವುದು ಅವರ ಬದ್ಧತೆಯ ಪ್ರತೀಕವಾಗಿದೆ. ಇದು ಅವರಿಗೆ ಜನ ನೀಡಿರುವ ಪ್ರೀತಿಯನ್ನು ತೋರಿಸುತ್ತದೆಂದು ಹೇಳಿದ್ದಾರೆ.



**ಮೋದಿ ಅಧಿಕಾರದ ಹಾದಿ**

2001ರ ಅಕ್ಟೋಬರ್ 7 ಮೊದಲ ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ಆಯ್ಕೆ
ಮೂರು ಬಾರಿ ಗುಜರಾತ್ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಣೆ
2014ರ ಮೇ 26 ಮೊದಲ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕಾರ
ಪ್ರಸ್ತುತ ಮೂರನೇ ಬಾರಿ ಪ್ರಧಾನಿಯಾಗಿ ಕಾರ್ಯನಿರ್ವಹಣೆ

# ಮುಸ್ಲಿಮರಿಗೆ ಕೈ ತಪ್ಪಿದ ಕಾಂಗ್ರೆಸ್ ಟಿಕೆಟ್: ಪ್ರತಿಭಟನೆ

## ದಾವಣಗೆರೆ ದಕ್ಷಿಣ ಉಪ ಚುನಾವಣೆ

• ಪ್ರಜೋದಯ ವರದಿ

**ದಾವಣಗೆರೆ:** ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ಬೆನ್ನಲ್ಲೇ ಮುಸ್ಲಿಂ ಸಮುದಾಯದ ಅಸಮಾಧಾನ ಭುಗಿಲೆದ್ದಿದೆ. ಕಾಂಗ್ರೆಸ್ ಅಲ್ಪ ಸಂಖ್ಯಾತ ಘಟಕದ ಯುವ ಮುಖಂಡರು ಕಪ್ಪು ಬಾವುಟ ಹಿಡಿದು ಪಕ್ಷದ ಹೈಕಮಾಂಡ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇಲ್ಲಿನ ಅಖ್ತರ್ ರಜಾ ವೃತ್ತದಲ್ಲಿ ಭಾನುವಾರ ಸಂಜೆ ಜಮಾಯಿಸಿದ ಮುಸ್ಲಿಂ ಸಮುದಾಯದ ಯುವಕರು ವಾಹನ ಸಂಚಾರ ತಡೆದು ಪ್ರತಿಭಟನೆ ನಡೆಸಿದರು. ಜಸ್ಟೀಸ್ ಫಾರ್ ಮುಸ್ಲಿಂ ಭಿತ್ತಿಪತ್ರಗಳನ್ನು ಹಿಡಿದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಿರುದ್ಧ ಘೋಷಣೆ ಕೂಗಿದರು.



ಮುಸ್ಲಿಂ ಸಮುದಾಯ ಶಾಮನೂರು ಶಿವಶಂಕರಪ್ಪ ಅವರನ್ನು ನಿರಂತರವಾಗಿ ಗೆಲ್ಲಿಸಿಕೊಂಡು ಬಂದಿದೆ. ಟಿಕೆಟ್ ನೀಡುವ ಭರವಸೆ ನೀಡಿದ್ದ ಕಾಂಗ್ರೆಸ್, ಅಲ್ಪಸಂಖ್ಯಾತರಿಗೆ ದ್ರೋಹ ಬಗೆದಿದೆ. ಬೇರೆ ಯಾವ ಪಕ್ಷದ ಅಭ್ಯರ್ಥಿಯನ್ನಾದರೂ ಬೆಂಬಲಿಸುತ್ತೇವೆ, ಕಾಂಗ್ರೆಸ್‌ಗೆ ಮತ ಹಾಕುವುದಿಲ್ಲ ಎಂದು ಕಾಂಗ್ರೆಸ್ ಮುಖಂಡ ಮನ್ಸೂರ್ ಅಲಿ ಹೇಳಿದರು.

500, 1,000 ನೀಡಿದರೆ ಮುಸ್ಲಿಮರು ಮತ ಹಾಕುತ್ತಾರೆ ಎಂದೆಲ್ಲಾ ಕೆಲವರು ಮಾತನಾಡಿದ್ದಾರೆ. ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ಏಕವಚನದಲ್ಲಿ ಟೀಕಿಸಿದ್ದಾರೆ. ಸ್ವಾಭಿಮಾನ ಇರುವ ಯಾವ ಮುಸ್ಲಿಮರೂ ಕಾಂಗ್ರೆಸ್‌ಗೆ ಮತ ನೀಡಬಾರದೆಂದು ಹೇಳಿದರು. ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿರುವ ಸಯ್ಯದ್ ಆರೀಫ್, ಸಯ್ಯದ್ ರಿಯಾಜ್, ವಾಸಿಂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ರಸ್ತೆಯಲ್ಲಿ ಪ್ರತಿ ಭಟನೆ ನಡೆಸಿದ್ದರಿಂದ ಅರ್ಧ ಗಂಟೆಗೂ ಹೆಚ್ಚು ಹೊತ್ತು ವಾಹನಗಳ ಸಂಚಾರಕ್ಕೆ ಅಡಚಣೆಯಾಯಿತು.

# ವ್ಯವಸ್ಥೆಯ ಬಲವರ್ಧನೆಗಷ್ಟೇ ಎಐ ಬಳಕೆಯಾಗಲಿ

• ಪ್ರಜೋದಯ ವರದಿ



**ಬೆಂಗಳೂರು:** ನ್ಯಾಯಾಂಗದ ಮೂಲ ತತ್ವಕ್ಕೆ ಹಾನಿಯಾಗದಂತೆ, ವ್ಯವಸ್ಥೆಯ ಬಲವರ್ಧನೆ ಸಲುವಾಗಿ ಮಾತ್ರವೇ ಕೃತಕ ಬುದ್ಧಿಮತ್ತೆಯನ್ನು (ಎಐ) ಅಳವಡಿಸಿಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯ ಮೂರ್ತಿ ಸೂರ್ಯಕಾಂತ್ ಅವರು ಹೇಳಿದ್ದಾರೆ.

ಬಾರ್ ಅಸೋಸಿಯೇಷನ್ ಆಫ್ ಇಂಡಿಯಾ, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ ಸಹಯೋಗದಲ್ಲಿ ಕರ್ನಾಟಕ ನ್ಯಾಯಾಂಗ ಅಕಾಡೆಮಿಯಲ್ಲಿ ಆಯೋಜಿಸಿದ್ದ ಕೃತಕ ಬುದ್ಧಿ ಮತ್ತೆ-ವಿವಾದಗಳ ಪರಿಹಾರ ಮತ್ತು ತಡೆಗಟ್ಟುವಿಕೆ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಎಐ ಅನ್ನು ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ಆಗುವ ವಿಳಂಬವನ್ನು ಕಡಿಮೆ ಮಾಡಲು ಹಾಗು ದೊಡ್ಡ ದೊಡ್ಡ ದಾಖಲೆಗಳನ್ನು ನಿರ್ವಹಿಸುವ ಸಲುವಾಗಿ ಬಳಕೆ ಮಾಡಬೇಕೇ ಹೊರತು ತೀರ್ಪು ನೀಡುವುದಕ್ಕೆ ಅಲ್ಲವೆಂದು ಪ್ರತಿಪಾದಿಸಿದ್ದಾರೆ.

ದೊಡ್ಡ ಪ್ರಮಾಣದಲ್ಲಿರುವ ಅಂಕಿ-ಅಂಶಗಳು, ದಾಖಲೆಗಳನ್ನು ನಿರ್ವಹಿಸಲು ಹಾಗು ವಿಳಂಬವಾಗದಂತೆ ನೋಡಿಕೊಳ್ಳಲು ಎಐ ನೆರವಾಗಬೇಕು. ಆದರೆ, ತೀರ್ಪುಗಳನ್ನು ಪ್ರಕಟಿಸುವ ನ್ಯಾಯಾಂಗದ ಕಾರ್ಯವನ್ನೇ ಅದು ಅತಿಕ್ರಮಿಸಬಾರದು ಎಂದಿದ್ದಾರೆ.

ಬಳಕೆ ಹೆಚ್ಚಾದಂತೆ, ನಿರ್ಧಾರ ಕೈಗೊಳ್ಳುವಿಕೆಯಲ್ಲೂ ಎಐ ನಿರ್ಣಾಯಕ ಪಾತ್ರ ವಹಿಸುತ್ತಿದೆ. ಇದು, ನ್ಯಾಯ ದಾನದ ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಮೇಲೆ ಪರಿಣಾಮ ಬೀರುತ್ತದೆ. ಅದೇ ಕಾರಣಕ್ಕೆ ತೀರ್ಪು ಪ್ರಕಟಿಸುವ ಅಂತಿಮ ತೀರ್ಮಾನವು ಮನುಷ್ಯರಿಂದಲೇ ಆಗಬೇಕು ಎಂದರು.

# ಶೈಕ್ಷಣಿಕ, ಆರೋಗ್ಯ ರಕ್ಷಣಾ ಸಾಮಾಗ್ರಿ ವಿತರಣೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಅಚ್ಚನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿ ಕೇಂದ್ರದ ಮಕ್ಕಳಿಗೆ ಬೆಂಗಳೂರಿನ 2 ರೈಡರ್ಸ್ ಗ್ರೂಪ್ ವತಿಯಿಂದ ಶೈಕ್ಷಣಿಕ ಹಾಗೂ ಆರೋಗ್ಯ ರಕ್ಷಣಾ ಸಾಮಾಗ್ರಿ ಗಳನ್ನು ವಿತರಿಸಲಾಯಿತು.

ಗ್ರಾಮೀಣ ಭಾಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ಶುದ್ಧೀಕರಣಕ್ಕಾಗಿ ವಾಟರ್ ಫಿಲ್ಟರ್, ಚಳಿಗಾಲದ ರಕ್ಷಣೆಗಾಗಿ ಸ್ವೆಟರ್ ಹಾಗೂ ಮಕ್ಕಳಿಗೆ ಓದಲು ಅನುಕೂಲವಾಗುವಂತೆ ಸ್ಟಡಿ ಟೇಬಲ್ ಮತ್ತು ಕುರ್ಚಿಗಳನ್ನು ನೀಡಲಾಯಿತು. ಅದರೊಂದಿಗೆ ಕ್ರಯಾನ್ಸ್, ಕಲರ್ ಪೆನ್, ಪೆನ್ಸಿಲ್, ಕಂಪಾಸ್ ಬಾಕ್ಸ್ ಸೇರಿ ವಿವಿಧ ಶೈಕ್ಷಣಿಕ ಕಿಟ್ ಹಾಗೂ ಸಿಹಿ ತಿಂಡಿಗಳನ್ನು ಮಕ್ಕಳಿಗೆ ವಿತರಿಸಲಾಯಿತು.

ದೇವಲದಕೆರೆ ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಪೂರ್ಣೇಶ್, ಇಂದಿಗೂ ಗ್ರಾಮೀಣ ಭಾಗದ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿದೆ. ಇಂತಹ ಸಂದರ್ಭದಲ್ಲಿ ಸ್ವಯಂಸೇವಾ ಸಂಸ್ಥೆಗಳು ಮುಂದೆ ಬಂದು ನೆರವಾಗುತ್ತಿರುವುದು ಶ್ಲಾಘನೀಯ. ಇಂತಹ ಸಣ್ಣ ಸಹಾಯಗಳು ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬಿ ಅವರ ಭವಿಷ್ಯವನ್ನು ಬೆಳಗಲು ಸಹಕಾರಿಯಾ ಗಲಿವೆ. ಮೂಲಭೂತ ಸೌಲಭ್ಯಗಳ ಕೊರತೆ ನೀಗಿಸಲು ಸಂಘಟನೆಗಳ ನೆರವು ಅಗತ್ಯ ಎಂದು ತಿಳಿಸಿದರು.



ದಾನಿಗಳಿಂದ ಲಭಿಸಿದ ಈ ಸಾಮಗ್ರಿಗಳು ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಪೂರಕವಾಗಿವೆ ಎಂದ ಅವರು, ಅಂಗನವಾಡಿ ಕಾರ್ಯಕರ್ತೆಯರು ಕೂಡ ಈ ನೆರವಿನಿಂದ ಮಕ್ಕಳ ಪೌಷ್ಠಿಕತೆ ಹಾಗೂ ಕಲಿಕೆಯ ವಾತಾವರಣ ಸುಧಾರಿಸಲಿದೆ ಎಂದು ಹೇಳಿದರು.

ರೈಡರ್ಸ್ ತಂಡದ ಡಾ.ರಘು ಮಾತನಾಡಿ, 2 ತಂಡವು ಮುಂದಿನ ದಿನಗಳಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಹತ್ತಾರು ಸೇವಾ ಚಟುವಟಿಕೆಗಳನ್ನು ಮುಂದುವರಿಸುವುದಾಗಿ ತಿಳಿಸಿದರು.

ಶಾಲೆಯ ಮುಖ್ಯೋಪಾಧ್ಯಾಯ ಪ್ರಭು, ಅಂಗನವಾಡಿಯ ಬಿ.ಕೆ. ಜ್ಯೋತಿ, ರೋಶನ್, ಹರೀಶ್, ಜಯ್ ತ್ರಿವೇದಿ, ಸ್ವಪ್ನ, ಶ್ರೇಯಸ್ ಉಪಸ್ಥಿತರಿದ್ದರು.

# ಪಾಕ್ ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆಗೆ 350 ಎಸ್‌ಒಜಿ ಸಿಬ್ಬಂದಿ

• ಪ್ರಜೋದಯ ವರದಿ

**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ದಟ್ಟಾರಣ್ಯ ಹಾಗು ಕಡಿದಾದ ಕಣಿವೆ ಪ್ರದೇಶಗಳಲ್ಲಿ ಅಡಗಿರುವ ಪಾಕಿಸ್ತಾನದ ಭಯೋತ್ಪಾದಕರನ್ನು ಮಟ್ಟ ಹಾಕಲು ವಿಶೇಷ ಕಾರ್ಯಾಚರಣೆ ಗುಂಪಿನ (ಎಸ್‌ಒಜಿ) 350 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ವಿಶೇಷ ಕಾರ್ಯಾಚರಣೆ ಗುಂಪು (ಎಸ್‌ಒಜಿ), ಜಮ್ಮು ಮತ್ತು ಕಾಶ್ಮೀರ ಪೊಲೀಸ್‌ನ ವಿಶೇಷ ಘಟಕವಾಗಿದ್ದು, ಭಯೋತ್ಪಾದನಾ ನಿಗ್ರಹ ಸೇರಿ ಕ್ಲಿಷ್ಟಕರ ಭೂಪ್ರದೇಶದಲ್ಲಿ ಕಾರ್ಯಾಚರಣೆ ನಡೆಸುವ ಪರಿಣಿತಿಯನ್ನು ಹೊಂದಿದೆ.

ಎಸ್‌ಒಜಿ ಗುಂಪಿನ ಸಿಬ್ಬಂದಿ, ಆಂಧ್ರ ಪ್ರದೇಶದಲ್ಲಿ ವಿಶೇಷ ತರಬೇತಿ ಪಡೆದಿದೆ. ಅದರ ಮೊದಲ ಗುಂಪು 10 ತಿಂಗಳ ಹಿಂದೆ ವಿಶೇಷ ತರಬೇತಿ ಆರಂಭಿಸಿತ್ತು. ಹಿಮಾಲಯ ಪರ್ವತ ಶ್ರೇಣಿ, ಗುಡ್ಡಗಾಡು ಪ್ರದೇಶದಲ್ಲಿ ಕಾರ್ಯಾಚರಿಸಲು ವಿಶೇಷ ಪರಿಣಿತಿಯನ್ನು ಹೊಂದಿದ ಈ ಪಡೆ, ಕಣಿವೆ ರಾಜ್ಯದಲ್ಲಿ ಭಯೋತ್ಪಾದನಾ ವಿರುದ್ಧ ಕಾರ್ಯಾಚರಣೆಯಲ್ಲಿ ಮತ್ತಷ್ಟು ಪರಿಣಾಮಕಾರಿಯೆನಿಸಲಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

2025ರ ಏ.22ರಂದು ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ನಡೆದ ಭಯೋ ತ್ಪಾದನಾ ದಾಳಿಯಲ್ಲಿ 26 ಮಂದಿ ಮೃತಪಟ್ಟಿದ್ದರು. ಈ ದಾಳಿಯು ಅತ್ಯಂತ ಕಠಿಣ ಭೂ ಪ್ರದೇಶದಲ್ಲೂ ಕಾರ್ಯಾಚರಿಸುವ ಅಗತ್ಯತೆಯನ್ನು ಸಾರಿದೆ. ತರಬೇತಿ ಪೂರ್ಣಗೊಳಿಸಿದ ಸಿಬ್ಬಂದಿಯನ್ನು ಕಾರ್ಯಾಚರಣೆಗಾಗಿ ನಿಯೋಜಿಸಲಾಗುತ್ತಿದೆಂದು ಅಧಿಕಾರಿಗಳು ತಿಳಿಸಿದ್ದಾರೆ.



ಭಯೋತ್ಪಾದಕರಿಗೆ ಅಡಗುತಾಣವಾಗಿರುವ ಕಡಿದಾದ ಅರಣ್ಯ ಪ್ರದೇಶದಲ್ಲಿ ಎಸ್‌ಒಜಿ ತಂಡವು ಕಾರ್ಯಾಚರಣೆ ನಡೆಸಲಿದೆ. ಇದು ಕಾರ್ಯತಂತ್ರ ಯೋಜನೆಯಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಗಿದೆ ಎಂದಿದ್ದಾರೆ.

ಎಸ್‌ಒಜಿ ಕಾರ್ಯಾಚರಣೆಗೆ ಪೂರಕವಾಗಿ ಗೃಹ ಸಚಿವಾಲಯು ಅಂತರರಾಷ್ಟ್ರೀಯ ಗಡಿಯಲ್ಲಿ ಗಡಿ ಭದ್ರತಾ ಪಡೆಯ ಏಳು ಹೆಚ್ಚುವರಿ ಬೆಟಾಲಿಯನ್‌ಗಳನ್ನು ನಿಯೋಜಿಸಿದೆ. ಗಡಿಯಲ್ಲಿ ನುಸುಳುವಿಕೆಯನ್ನು ಸಂಪೂರ್ಣವಾಗಿ ತಡೆಯುವುದು ಇದರ ಗುರಿಯಾಗಿದೆ. ಪಾಕ್ ಸೇನೆಯಿಂದ ತರಬೇತಿ ಪಡೆದ ಭಯೋತ್ಪಾದಕರು ಅಂತಾರಾಷ್ಟ್ರೀಯ ಗಡಿಯ ಸಮೀಪ ಲಾಂಚ್ ಪ್ಯಾಡ್‌ಗಳಲ್ಲಿ ಸಕ್ರಿಯರಾಗಿದ್ದಾರೆಂದು ಮೂಲಗಳು ತಿಳಿಸಿವೆ. ಹಾಗಾಗಿ ಎಸ್‌ಒಜಿ ಸಹಿತ ಬಿಎಸ್‌ಎಫ್ ನಿಯೋಜನೆಯು ಉಗ್ರರ ಬೆದರಿಕೆಗಳನ್ನು ಮಟ್ಟ ಹಾಕಲು ನೆರವಾಗಲಿದೆ.

# ಕ್ಷೇತ್ರದ ಸರ್ವಾಂಗೀಣ ವಿಕಾಸಕ್ಕೆ ಬುನಾದಿ ಹಾಕಿದ ಚಾರುಕೀರ್ತಿ ಶ್ರೀ



• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಕ್ಷೇತ್ರದ ಹೊರ ವಲಯದಲ್ಲಿರುವ ಚಾರುಗಿರಿ ಬೆಟ್ಟದಲ್ಲಿ ಚಾರುಕೀರ್ತಿ ಶ್ರೀಗಳ 3ನೇ ವರ್ಷದ ಪುಣ್ಯಸ್ಮರಣೆಯ ನಡೆಯಿತು.

ಬೆಟ್ಟದ ಸಮಾಧಿ ಸ್ಥಳದಲ್ಲಿ ಶ್ರೀಗಳ ಪಾದುಕೆಗಳಿಗೆ ಅಭಿಷೇಕ, ಪುಷ್ಪಾರ್ಚನೆ ನೆರವೇರಿಸ ಲಾಯಿತು. ಸಾನಿಧ್ಯ ವಹಿಸಿದ್ದ ಆಚಾರ್ಯ ಅನೇಕಾಂತ ಸಾಗರ ಮಹಾರಾಜರು, ವೈರಾಗ್ಯ ಮೂರ್ತಿ ಭಗವಾನ್ ಬಾಹುಬಲಿಯ 4 ಮಹಾ ಮಸ್ತಕಾಭಿಷೇಕಗಳನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಚಾರುಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ. ಲೋಕಕ್ಕೆ ಬಾಹುಬಲಿಯ ತ್ಯಾಗ ವೈರಾಗ್ಯ ಶಾಂತಿ, ಅಹಿಂಸೆ, ಮೈತ್ರಿ ಭಾವವನ್ನು ಪರಿಚಯಿಸಿದ ಹೆಗ್ಗಳಿಕೆ ಅವರದು ಎಂದರು.

ಶ್ರವಣಬೆಳಗೊಳದ ಬೆಳಕಾಗಿದ್ದ ಅವರು ಕ್ಷೇತ್ರದ ಸರ್ವಾಂಗೀಣ ವಿಕಾಸಕ್ಕೆ ಭದ್ರ ಬುನಾದಿ ಹಾಕಿದ್ದರು. ಸರ್ವ ಧರ್ಮಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು ಎಂದರು.

ಮೈಸೂರು, ಬೆಂಗಳೂರು, ಹಾಸನ, ಮಂಡ್ಯ ಸೇರಿ ವಿವಿಧೆಡೆಯ ಭಕ್ತರು ಪಾಲ್ಗೊಂಡಿದ್ದರು. ಗ್ರಾಮ ಪಂಚಾಯಿತಿ ಸದಸ್ಯ ಎಸ್.ಬಿ.ಯಶಸ್, ಆಡಳಿತ ಮಂಡಳಿ ಸದಸ್ಯರಾದ ಭರತೇಶ್, ಪೌದನ್, ಶ್ರೇಯಸ್, ಹೇಮಂತ್ ಕುಮಾರ್ ಜೈನ್ ಸಮಾಜದ ಅಧ್ಯಕ್ಷ ಪದ್ಮಕುಮಾರ್, ಕಾರ್ಯದರ್ಶಿ ಎಸ್.ಪಿ.ಬಾನುಕುಮಾರ್ ಸುತ್ತಲಿನ ಗ್ರಾಮಸ್ಥರು ಪಾಲ್ಗೊಂಡಿದ್ದರು.

### ಯುನೆಸ್ಕೊದ ಗ್ಲೋಬಲ್ ಎಜುಕೇಶನ್ ಮಾನಿಟರಿಂಗ್ ತಂಡ ವರದಿ

# ವಿಶ್ವದ ಅರ್ಧಕ್ಕಿಂತ ಹೆಚ್ಚು ದೇಶಗಳ ಶಾಲೆಗಳಲ್ಲಿ ಫೋನ್ ನಿಷೇಧ

• ಪ್ರಜೋದಯ ವರದಿ

**ನವದೆಹಲಿ:** ತರಗತಿಗಳಲ್ಲಿ ವಿದ್ಯಾರ್ಥಿಗಳ ಗಮನ ಕಡಿಮೆಯಾಗುತ್ತಿರುವುದು ಹಾಗೂ ಸೈಬರ್ ಬೆದರಿಕೆ ಹಿನ್ನಲೆ ವಿಶ್ವದ ಅರ್ಧಕ್ಕಿಂತ ಹೆಚ್ಚು ದೇಶಗಳು ಶಾಲೆಗಳಲ್ಲಿ ಮೊಬೈಲ್ ಫೋನ್‌ಗಳನ್ನು ನಿಷೇಧಿಸಿವೆ ಎಂದು ಯುನೆಸ್ಕೊದ ಗ್ಲೋಬಲ್ ಎಜುಕೇಶನ್ ಮಾನಿಟರಿಂಗ್ ತಂಡ ತಿಳಿಸಿದೆ.

ಸಾಮಾಜಿಕ ಮಾಧ್ಯಮ ಬಳಕೆಯಿಂದ ಉಲ್ಬಣಗೊಳ್ಳುವ ಈಟಿಂಗ್ ಡಿಸಾರ್ಡರ್‌ಗೆ (ಆಹಾರ ಸೇವಿಸಲು ತೊಂದರೆ) ಬಾಲಕಕರಿಗಿಂತ ಬಾಲಕಿಯರು ಎರಡು ಪಟ್ಟು ಹೆಚ್ಚು ಒಳಗಾಗುವ ಸಾಧ್ಯತೆ ಇದೆ ತಂಡವು ಹೇಳಿದೆ.

ಫೇಸ್‌ಬುಕ್ ನಡೆಸಿದ ಸಂಶೋಧನೆಯ ಪ್ರಕಾರ, ಇನ್‌ಸ್ಟಾಗ್ರಾಮ್ ಬಳಸಿದ ಬಳಿಕ ಶೇ.32 ರಷ್ಟು ಹದಿಹರೆಯದ ಹುಡುಗಿಯರು ತಮ್ಮ ದೇಹದ ಕೀಳರಿಮೆ ಭಾವನೆ ಹೊಂದಿದ್ದಾರೆ ಎನ್ನಲಾಗಿದೆ. ಇತ್ತೀಚಿನ ವರದಿಯ ಪ್ರಕಾರ 114 ದೇಶಗಳು ಶಾಲೆಗಳಲ್ಲಿ ಮೊಬೈಲ್ ಫೋನ್‌ಗಳ ಮೇಲೆ ನಿಷೇಧವನ್ನು ಹೇರಿವೆ. ಅಂದರೆ ಪ್ರಪಂಚದ ಶೇ.58ರಷ್ಟು ದೇಶಗಳು. 2023ರ ಜೂನ್‌ನಲ್ಲಿ ಜಿಇಎಮ್ ವರದಿಯಲ್ಲಿ ಮೊದಲ ಬಾರಿಗೆ ಈ ವಿಷಯವನ್ನು ಪರಿಶೀಲಿಸಲಾಗಿದ್ದು, ಈ ಅವಧಿಯಲ್ಲಿ 4 ದೇಶಗಳಲ್ಲಿ ಒಂದಕ್ಕಿಂತ ಕಡಿಮೆ (24 ಶೇಕಡಾ) ದೇಶಗಳಲ್ಲಿ ಮಾತ್ರ ನಿಷೇಧ ಇತ್ತು. 2025ರ ಆರಂಭದ ವೇಳೆಗೆ, ಇದು ಶೇ.40ಕ್ಕೆ ಏರಿಕೆಯಾಯಿತು. 2026ರ ಮಾರ್ಚ್ ಹೊತ್ತಿಗೆ, ಆ ಪ್ರಮಾಣವು ಸುಮಾರು ಶೇ.20ರಷ್ಟು ಹೆಚ್ಚಾಗಿದೆ ಎಂದು ಜಿಇಎಂನ ಹಿರಿಯ ಸದಸ್ಯರೊಬ್ಬರು ತಿಳಿಸಿದ್ದಾರೆ.

ಈ ಬೆಳವಣಿಗೆಯು ತರಗತಿಗಳಲ್ಲಿ ಗಮನ ಕಡಿಮೆಯಾಗುವುದು, ಸೈಬರ್ ಬೆದರಿಕೆ ಮತ್ತು ಮಕ್ಕಳ ಮೇಲೆ ಡಿಜಿಟಲ್‌ನ ವ್ಯಾಪಕ ಪ್ರಭಾವದ ಬಗ್ಗೆ ಹೆಚ್ಚುತ್ತಿರುವ ಕಳವಳಗಳನ್ನು ಪ್ರತಿ ಬಿಂಬಿಸುತ್ತದೆ ಎಂದೂ ಅವರು ಪ್ರತಿಪಾದಿಸಿದ್ದಾರೆ.

2025ರ ಕೊನೆಯ ಭಾಗದಲ್ಲಿ ಹಲವಾರು ದೇಶಗಳು ಶಾಲೆಗಳಲ್ಲಿ ಫೋನ್ ಬಳಕೆಗೆ ನಿಷೇಧ ಹೇರಿವೆ.ಅವುಗಳಲ್ಲಿ ಬೊಲಿವಿಯಾ, ಕೋಸ್ಟರಿಕಾ, ಕ್ರೊವೇಷ್ಯಾ, ಜಾರ್ಜಿಯಾ, ಮಾಲ್ಡೀವ್ಸ್ ಮತ್ತು ಮಾಲ್ಟಾ ಸೇರಿವೆ. ಈ ವಿಚಾರದ (ಫೋನ್ ನಿಷೇಧ) ಫ್ರಾನ್ಸ್‌ನಲ್ಲಿ ಇನ್ನೂ ಚರ್ಚೆ ಮುಂದುವರಿದಿದೆ. ಶಾಲೆಗಳಲ್ಲಿ ಮೊಬೈಲ್ ಫೋನ್ ಬಳಕೆಯನ್ನು ನಿಷೇಧಿಸುವ ಮೊದಲ ಹಂತದ ಭಾಗವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮೊಬೈಲ್ ಬಳಕೆಯನ್ನು ನಿಷೇಧಿಸಿದೆ.



ಇನ್ನಷ್ಟು ನಿಯಂತ್ರಣದ ಅಗತ್ಯವಿದೆಯೇ ಎಂಬ ಬಗ್ಗೆಯೂ ಅಲ್ಲಿ ಚರ್ಚೆ ನಡೆಯುತ್ತಿದೆ. ಫ್ರೆಂಚ್ ಸಂಸತ್ತಿನಲ್ಲಿ ಪರಿಗಣನೆಯಲ್ಲಿರುವ ಮಸೂದೆಯು, ಶಾಲೆಗಳಲ್ಲಿ ಸ್ಮಾರ್ಟ್‌ಫೋನ್ ಬಳಕೆಯನ್ನು ನಿಯಂತ್ರಿಸುವ ಕುರಿತು ಇನ್ನಷ್ಟು ಸ್ಪಷ್ಟ ನಿಯಮಗಳನ್ನು ರೂಪಿಸಲು ಉದ್ದೇಶಿಸಿದೆ ಎಂದು ಜಿಇಎಮ್ ತಿಳಿಸಿದೆ.

ಎಲ್ಲಾ ಸರ್ಕಾರಗಳು ಸಂಪೂರ್ಣ ನಿಷೇಧವನ್ನು ಆಯ್ಕೆ ಮಾಡುತ್ತಿಲ್ಲ. ಕೆಲವು ದೇಶಗಳು ಇತ್ತೀಚೆಗೆ ಶಾಲೆಗಳಲ್ಲಿ ಫೋನ್ ಬಳಕೆ ನಿಯಂತ್ರಿಸುವ ಬಗ್ಗೆ ನೀತಿ ನಿಯಮಗಳನ್ನು ರೂಪಿಸಿಕೊಂಡಿವೆ. ಆದರೆ ದೇಶ ವ್ಯಾಪಿ ಕಠಿಣ ನಿಷೇಧವನ್ನು ಜಾರಿಗೆ ತಂದಿಲ್ಲ ಎಂದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅನೇಕ ಸಂದರ್ಭಗಳಲ್ಲಿ, ಈ ನಿಷೇಧ ಶಾಲಾ ಅವಧಿಯಲ್ಲಿ ಅಥವಾ ತರಗತಿಗಳ ಒಳಗೆ ಮಾತ್ರ ಅನ್ವಯವಾಗುತ್ತದೆ. ಕೆಲವು ಶಿಕ್ಷಣ ಸಂಸ್ಥೆಗಳು ಮೊಬೈಲ್‌ಗಳನ್ನು ಕೇವಲ ಶೈಕ್ಷಣಿಕ ಉದ್ದೇಶಗಳಿಗಾಗಿ, ವಿಶೇಷ ವಿದ್ಯಾರ್ಥಿಗಳ ಗುಂಪುಗಳಿಗೆ (ಉದಾ: ಅಂಗವೈಕಲ್ಯ ಅಥವಾ ಅನಾರೋಗ್ಯ ಹೊಂದಿರುವವರಿಗೆ) ಮಾತ್ರ ಬಳಸಲು ಅನುಮತಿಸುತ್ತಿವೆ. ಅಥವಾ ಸ್ವಿಚ್ ಆಫ್ ಮಾಡಿ ಇಡುವಂತೆ ಸೂಚಿಸುತ್ತಿವೆ.

ಕೊಮೊರೊಸ್, ಕೊಲಂಬಿಯಾ, ಎಸ್ಟೋನಿಯಾ, ಲಿಥುವೇನಿಯಾ, ಐಸ್‌ಲ್ಯಾಂಡ್, ಪೆರು,ಇಂಡೊನೇಷ್ಯಾ,ಸರ್ಬಿಯಾ, ಪೋಲೆಂಡ್ ಮತ್ತು ಫಿಲಿಪೈನ್ಸ್ ದೇಶಗಳು ಇಂತಹ ಕ್ರಮಗಳನ್ನು ಅನುಸರಿಸಿ ರುವ ದೇಶಗಳಾಗಿವೆ.

ಶಿಕ್ಷಣ ವ್ಯವಸ್ಥೆ ವಿಕೇಂದ್ರೀಕೃತವಾಗಿರುವ ದೇಶಗಳಲ್ಲಿ, ಸಾಮಾನ್ಯವಾಗಿ ಈ ನಿರ್ಬಂಧಗಳನ್ನು ಪ್ರಾದೇಶಿಕ ಅಥವಾ ಸ್ಥಳೀಯ ಮಟ್ಟದಲ್ಲಿ ಮೊದಲು ಜಾರಿಗೆ ತರಲಾಗುತ್ತದೆ. ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ದೇಶ ವ್ಯಾಪಿ ನಿಷೇಧವಿಲ್ಲದಿದ್ದರೂ, 39 ರಾಜ್ಯಗಳು ಶಾಲಾ ತರಗತಿಗಳಲ್ಲಿ ಫೋನ್ ಬಳಕೆಯನ್ನು ನಿಷೇಧಿಸುವ ಬಗ್ಗೆ ನೀತಿ ನಿಯಮಗಳನ್ನು ಜಾರಿಗೆ ತಂದಿವೆ. ಇತರೆ ಬಹುತೇಕ ರಾಜ್ಯಗಳೂ ಫೋನ್ ಬಳಕೆಯನ್ನು ನಿಯಂತ್ರಿಸಲು ವಿಧೇಯಕಗಳನ್ನು ಮಂಡಿಸಿವೆ ಎಂದು ಹೇಳಿದೆ.

ಶೈಕ್ಷಣಿಕ ಯಶಸ್ಸಿಗೆ ಮಾನಸಿಕ ಆರೋಗ್ಯವು ನಿರ್ಣಾಯಕವಾಗಿದೆ. ಸಾಮಾಜಿಕ ಮಾಧ್ಯಮಗಳ ಪರಿಣಾಮವು ವಿಶೇಷವಾಗಿ ಬಾಲಕಿಯರ ಮೇಲೆ ಹೆಚ್ಚು ಪ್ರಭಾವಿತವಾಗಿದೆ. ಕೆಲವು ದೇಶಗಳು ಮಕ್ಕಳಿಗಾಗಿ ಸಾಮಾಜಿಕ ಮಾಧ್ಯಮ ಬಳಕೆಗೆ ನಿರ್ಬಂಧಗಳನ್ನು ಜಾರಿಗೆ ತಂದಿವೆ. ಉದಾ: ಆಸ್ಟ್ರೇಲಿಯಾ, ಫ್ರಾನ್ಸ್, ಪೋರ್ಚುಗಲ್ ಮತ್ತು ಸ್ಪೇನ್‌ನಲ್ಲಿ ಕಾನೂನು ಜಾರಿಯಲ್ಲಿವೆ. ಡೆನ್ಮಾರ್ಕ್, ಜೆಕ್ ಗಣರಾಜ್ಯ ಮತ್ತು ಇಂಡೊನೇಷ್ಯಾದಲ್ಲಿ ಚರ್ಚೆಗಳು ನಡೆಯುತ್ತಿವೆ.

